ಚು ನಾ ವ ಣೆ : ಜನತೆಯ ಗೆಲುವು ಮತ್ತು ಸೋಲು

ಪಂಚಮ ಈ ಹಿಂದೆ ನೆನಪಿಸಿದ್ದಂತೆ ದಲಿತರು ರೈತರು ಮತ್ತು ಕಾರ್ಮಿಕರ ನೋವಿನ ಪ್ರತೀಕಾರ ದಿಂದ ಕಾಂಗ್ರೆಸ್ ಪತನಗೊಂಡಿದೆ. "ಹರಿಜನ ಕೇರಿ ಕಾಂಗ್ರೆಸ್ ಗುತ್ತಿಗೆಯ ಮತಪೆಟ್ಟಿಗೆಯಲ್ಲ' ಎನ್ನುವುದನ್ನು ಎಚ್ಚೆತ್ತ ದಲಿತರು ತೋರಿಸಿಕೊಟ್ಟರೆ ರೈತರು ಮತ್ತು ಕಾರ್ಮಿಕರು ಕಾಂಗ್ರೆಸ್ಸನ್ನು ಪೂರ್ಣ ಅಳಿಸಿ ಹಾಕಿದ್ದಾರೆ. ಆದರೆ ಇದು ಜನತಾ ಪಕ್ಷದ ಮೇಲಿನ ಪ್ರೀತಿಯ ಮತ ಚಲಾವಣೆಯಲ್ಲ ವೆಂದೂ, ಭ್ರಷ್ಟಾಚಾರ, ಪಕ್ಷಾಂತರ, ಬೆಲೆಏರಿಕೆ, ದುರಾಡಳಿತ, ದಬ್ಬಾಳಿಕೆಗಳ ಮೇಲಿನ ಪ್ರತೀಕಾರದ ಮತಚಲಾವಣೆ ಎಂದೂ, ಬಡವರ, ಹಿಂದುಳಿದವರ ನೊಂದವರ ಮನಸ್ಸನ್ನು ಅರ್ಥ ಮಾಡಿಕೊಳ್ಳದ ಯಾವುದೇ ಪಕ್ಷಕ್ಕೂ ಇದೇ ಗತಿ ಆಗುತ್ತದೆ ಎಂದು ಎಚ್ಚರಿಸುತ್ತಾ, ಹೊಸ ಜನತಾ ಸರ್ಕಾರವನ್ನು ನಾವು ಸ್ವಾಗತಿಸುತ್ತೇವೆ.

ಈ ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿದ್ದರೂ ಕಾಂಗ್ರೆಸ್ಸಿಗಿಂತ ಕ್ರೂರ ಜಾತಿ ವಿಷದ ಬಿ.ಜೆ.ಪಿ. ನಾಲ್ಕು ಪಟ್ಟು ಹೆಚ್ಚು ಸೀಟು ಗಳಿಸಿ ಗೆದ್ದಿರುವುದು ಜನತೆಯ ಗೆಲುವ [illegible] ಸೋಲನ್ನಾಗಿ ಪರಿವರ್ತಿಸಿದೆ. ಜಾತಿಯೇ ಇಲ್ಲವೆಂದು ಸಾರುತ್ತಾ ತಮ್ಮ ಬ್ರಾಹ್ಮಣವಾದವನ್ನು ಬಿತ್ತುತ್ತಿರುವ ಈ ಬಿಜೆಪಿಗಳು ದಲಿತರ ಬಿಡುಗಡೆಯ ದಾರಿಗಳನ್ನು ಮುಚ್ಚತೊಡಗಿದ್ದಾರೆ. ದಲಿತರಿಗೆ ದಕ್ಕುತ್ತಿರುವ ಮೀಸಲಾತಿ ಸವಲತ್ತುಗಳ ವಿರುದ್ಧ ಜನರನ್ನು ಕೆರಳಿಸಿ ಗುಜರಾತಿನಲ್ಲಿ ನೂರಾರು ಜನ ದಲಿತರನ್ನು ಕೊಂದ ಇವರು ದಲಿತರ ಓಟು ಕೀಳಲು ಈಗ "ದಲಿತರಿಗೆ ಮೀಸಲಾತಿ ಬೇಕು" ಎಂಬ ಮಂಕುಬೂದಿ ನಾಟಕವಾಡತೊಡಗಿದ್ದಾರೆ. ದಲಿತರ ಪರಭಾರೆ ಮಾಡಿರುವ ದರಖಾಸ್ತು ಭೂಮಿಗಳು ದಲಿತರಿಗೇ ದಕ್ಕುವಂತೆ ಕಾನೂನಾಗಿದ್ದರೂ ಈ ಕಾನೂನನ್ನು ತಿರುಚಲು ಪೇಜಾವರ ಸ್ವಾಮಿಗಳ ನೇತೃತ್ವದಲ್ಲಿ ಬಿ.ಜೆ.ಪಿ.ಯು ಭಾರಿ ಸನ್ನಾಹ ನಡೆಸಿದೆ. ರೊಚ್ಚಿನಿಂದ ಪದ್ಯ ಬರೆದ ತಪ್ಪಿಗೆ ಗುಂಡೂರಾಯರಿಂದ ಸಸ್ಪೆಂಡಾಗಿ ಕುಳಿತಿರುವ ನಿಷ್ಠಾವಂತ ಬಿ. ಡಿ. ಓ, ದಲಿತ ಕವಿ, ಶ್ರೀ ಮುನಿವೆಂಕಟಪ್ಪನವರ ಘಟನೆಗೆ ಇವರಿಂದ ಈಗ ಯಾವ ಬಣ್ಣ ಬರುತ್ತದೊ ಕಾದು ನೋಡಬೇಕಾಗಿದೆ.

ಈ ಎಲ್ಲಾ ಸನ್ನಾಹಗಳ ವಿರುದ್ಧ ದಲಿತರ ಹೆಚ್ಚು ಎಚ್ಚರಗೊಳ್ಳಬೇಕಾಗಿದೆ. ಇಂಥ ಸನ್ನಾಹ ಗಳಿಗೆ ಬಲಿಯಾಗುವ ಸೂಚನೆ ಕಾಣುತ್ತಿರುವ ಜನತಾ ಸರ್ಕಾರಕ್ಕೆ ಬುದ್ಧಿ ಕಲಿಸಲು ದಲಿತ ಸಂಘರ್ಷ ಸಮಿತಿ ಯಂಥ ಸಂಘಟನೆಗಳು ಚುರುಕುಗೊಳ್ಳಬೇಕಾಗಿದೆ.

ಯಾಕೆಂದರೆ : ದಲಿತರ ಮೀಸಲಾತಿ ವಿರುದ್ಧ ಮಾತನಾಡುವ ಲಿಂಗವಂತ ಶ್ರೀ ನಿಜಲಿಂಗಪ್ಪನವರು ಜನತಾದಲ್ಲಿ ಎದ್ದು ಕಾಣತೊಡಗಿದ್ದಾರೆ. ಇವರ ಪಕ್ಕಾ ಬ್ರಾಹ್ಮಣ ಶಿಷ್ಯ ಶ್ರೀ ರಾಮಕೃಷ್ಣ ಹೆಗಡೆ ನಮ್ಮೆಲ್ಲರ ಮುಖ್ಯಮಂತ್ರಿಯಾಗಿ ಬೆಳೆಯ ಬೇಕಿದ್ದ ಜನತಾ ಪಕ್ಷವನ್ನು ಚಿಗುರಲ್ಲೇ ಚಿವುಟಿ ಹಾಕಿದ್ದಾರೆ. ಹಿಂದುಳಿದವರ ಮಾತಾಡುತ್ತಿದ್ದ ಶ್ರೀ ಬಂಗಾರಪ್ಪನಿಗೆ 1977 ರಲ್ಲಿ ಕೇಂದ್ರ ಜನತಾ ಸರ್ಕಾರದಲ್ಲಿ ದಲಿತ ಜಗಜೀವನರಾಮರಿಗಾದ ಗತಿ ಆಗಿದೆ !

—ಸಂಪಾದಕ.

ಪಂಚಮ

ಪುಟ : 7 ಸಂಚಿಕೆ 1 ಬೆಲೆ–50 ಪೈಸೆ ಜನವರಿ 20, 1983

ಪೋಲೀಸರು ಮಾಡಿಸಿದ ಕೊಲೆಗಳು

ನಾವು ಈ ಹಿಂದೆ ತಿಳಿಸಿದಂತೆ ನಂಜನಗೂಡು ತಾಲ್ಲೂಕು ದೇವರಸನ ಹಳ್ಳಿ ಕೋಮುಗಲಭೆಯ ಕೊಂಪೆಯಾಗಿದೆ. ಈವರೆಗೆ ನಾಕಾರು ನರಬಲಿ ಯಾಗಿವೆ. ಕಾರಣವಿರಲಿ ಇಲ್ಲದಿರಲಿ ಹರಿಜನರ ಕಂಡರೆ ವಕ್ಕಲಿಗರು, ವಕ್ಕಲಿಗರ ಕಂಡರೆ ಹರಿಜನರು ಪರಸ್ಪರ ಕೊಲೆ ಮಾಡುವ ಸ್ಥಿತಿ ಇಲ್ಲದೆ. ಈ ಎಲ್ಲ

ದೇವರಸನಹಳ್ಳಿ ಘಟನೆ

[illegible]ಂತಗಳಿಗೆ ಮೂಲಕಾರಣ ನಂಜನಗೂಡಿನ [illegible]ಲ್ ಇನ್ಸ್‌ಪೆಕ್ಟರ್ ಎಂ. ಪಿ. ಸೋಮಶೇಖರ್. [illegible]ಗೆ ವಕ್ಕಲಿಗರ ಹಣಬೇಕು; ಹರಿಜನರ ರಕ್ತ. ಈ ಮೂರ್ಖನ ದುರಾಸೆ ಮತ್ತು ಕುತಂ[illegible] ಫಲವಾಗಿ ಹರಿಜನರ ಕೆಂಚಯ್ಯ, ಬಸವಯ್ಯ ರಲ್ಲದೆ, ಮೇಲುಕೋಮಿನ ಕೆಂಚೇಗೌಡ ಮತ್ತು ಪ್ರಭಾಕರ ಸತ್ತಿದ್ದಾರೆ.

5:1:83ರ ರಾತ್ರಿ ಗಲಾಟೆ ಶುರುವಾಯ್ತು. ಸುಮಾರು 40 ಜನರ ಗುಂಪಿನೊಂದಿಗೆ ಸೂರಿ ಮತ್ತು ಪ್ರಸನ್ನ ಇಬ್ಬರು ಹರಿಜನ ಯುವಕರ ಮೇಲೆ ಹಲ್ಲೆ ನಡೆಸಿದರು. ಹಲ್ಲೆಗೊಳಗಾದವರೆ ಅರೆಸ್ಟಾದರು. ನಂತರ ಹರಿಜನ ಛೇರ್ಮನ್ ಪುಟ್ಟ ಮಾದಯ್ಯರ ಮೇಲೆ ತೀವ್ರ ಸ್ವರೂಪದ ಹಲ್ಲೆ ನಡೆದು ಅವರು ನಂಜನಗೂಡಿನ ಆಸ್ಪತ್ರೆ ಸೇರಿದರು. ಅವರನ್ನು ಕಂಡು ಮಾತಾಡಿದ ಸರ್ಕಲ್ ಇನ್ಸ್‌ಪೆಕ್ಟ ಹಿತವಚನ: ಇಷ್ಟೆ ಸಾಕಾ? ಇನ್ನೂ ಬೇಕಾ? ಎಂಬುದು.

ಈ ಊರಿನಲ್ಲಿ ಹರಿಜನರಿಗೆ ವಕ್ಕಲಿಗರು

ಕೊನೆಯ ಪುಟಕೆ

ದಲಿತರ ಮೂರು ಮುಖ

ಈ ಬಾರಿಯ ಚುನಾವಣೆಯಲ್ಲಿ ಭ್ರಷ್ಟ ಕಾಂಗ್ರೆಸ್ ಹಡಗಿನೊಂದಿಗೆ ಮುಳುಗಿಹೋದ ಮಂತ್ರಿ ಮಾನ್ಯರಲ್ಲಿ ಸಮಾಜ ಕಲ್ಯಾಣಮಂತ್ರಿ ಶ್ರೀ ವೆಂಕಟರಮಣರು ಪ್ರಮುಖರು. ಮಂತ್ರಿಯ ಗತ್ತಿನಲ್ಲಿ ಮೇಲ್ಜಾತಿಯ ಓಟು ಕೀಳಲು ನರಸೀಪುರಕ್ಷೇತ್ರದ ಹದಿನಾರು ಎಂಬ ಲಿಂಗಾಯಿತ ಮಠಕ್ಕೆ ಹೋಗಿ ವಾಪಸ್ಸು ಬರುವಾಗ ಹೊಲೆಯನಾಗಿ ಮಠ ನುಗ್ಗಿದ

ಹೀಗಿದೆ.... ಹೀಗಿದ್ದಾರೆ.....

ತಪ್ಪಿಗೆ ನೂರು ರೂಪಾಯಿ "ತಪ್ಪ" ಕೊಟ್ಟಿರುವ ಈತ ಏನೂ ಆಗೇ ಇಲ್ಲವೆನ್ನುವಂತೆ ಸೋತು ತಿರುಗಾಡುತ್ತಿದ್ದಾರೆ.

ಸಂತೆ ಮರಳ್ಳಿ ಕ್ಷೇತ್ರದಲ್ಲಿ ತನ್ನ ಮಗನ ಪರವಾಗಿ ಪ್ರಚಾರ ಮಾಡಲು ಹೋಗಿದ್ದ ಶ್ರೀ ಎನ್. ಸಿ. ಬಿಳಿಗಿರಿರಂಗಯ್ಯನವರು ದೇವನೂರಿನ ಲಿಂಗಾಯಿತ ಮಠಕ್ಕೆ ಬೂಟುಗಾಲಲ್ಲಿ ನುಗ್ಗಿ ಸುತ್ತಾಡಿ ಸ್ವಾಮಿಗಳಿಗೆ ಕೈಯನ್ನೂ ಮುಗಿಯದೆ ಓಟು ಕೇಳಿ ವಿಷ್ ಮಾಡಿ ಹೊರಕ್ಕೆ ಬಂದು 'ಅವರ ಓಟು ಯಾವನಿಗೆ ಬೇಕು ಲಿಂಗಾಯಿತರ ಮಠಕ್ಕೆ ನುಗ್ಗಬೇಕಿತ್ತು ಅಷ್ಟೆ'ಎಂದು ದಲಿತರೆಲ್ಲರ ಸ್ವಾಭಿಮಾನದ ಪ್ರತೀಕದಂತೆ ಮಗಸೋತರೂ ತಾನು ಗೆದ್ದಂತೆ ಬೀಗಿ ತಿರುಗಾಡುತ್ತಿದ್ದಾರೆ. ಲಿಂಗವಂತರು ನಂತರ ಮಠವನ್ನೆಲ್ಲ ತೊಳೆದು ಶುಚಿ ಮಾಡಿದರಂತೆ.

ಇನ್ನೊಂದು ಕಡೆ ಇದೇ ದೇವನೂರ ಮಠದ ಬಾಗಿಲಲ್ಲೆ ನಿಂತು ಕರ್ಪೂರ ಹಚ್ಚಿ ಓಟು ಕೇಳಿ ಲಿಂಗಾಯಿತರ ಮೆಚ್ಚುಗೆ ಪಡೆದು ಗೆದ್ದು ಮುಖ್ಯಮಂತ್ರಿಯಾಗುವಲ್ಲಿ ಸೋತು ಈಗ ಶಿಕ್ಷಣ ಸಚಿವರಾಗಿ ಶ್ರೀ ಬಿ. ರಾಚಯ್ಯನವರು ತಿರುಗಾಡುತ್ತಿದ್ದಾರೆ.

—ಬಿಂಬಾ

ಹರಿಜನ ಕೇರಿ ಕಾಂಗ್ರೆಸ್ ಗುತ್ತಿಗೆಯ ಮತಪೆಟ್ಟಿಗೆಯಲ್ಲ

ಚುನಾವಣಾ ಪ್ರಚಾರದ ಅಬ್ಬರಗಳ ನಡುವೆ ದಿ; 29-12-82 ರಂದು ಚಿಕ್ಕಮಗಳೂರಿನಲ್ಲಿ ಜಿಲ್ಲಾ ಮಟ್ಟದ ದಲಿತ ಸಮ್ಮೇಳನ ನಡೆದಿತ್ತು. ಸಾವಿರಾರು ಜನ ಕೂಲಿಕಾರರು, ಬಡರೈತರು, ವಿದ್ಯಾರ್ಥಿಗಳು ಸೇರಿದ್ದ ಈ ಸಮ್ಮೇಳನ ಚುನಾವಣೆಯ ಬಿರುಸಿನಲ್ಲೂ ಎದ್ದು ಕಾಣುತ್ತಿತ್ತು.

ಬೆಳಿಗ್ಗೆ 11 ಗಂಟೆಗೆ ದಲಿತ ಸಂಘರ್ಷ ಸಮಿತಿ ಕಛೇರಿಯಿಂದ ಹೊರಟ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಚಲಿಸಿ ಉಳ್ಳವರಿಗೆ ಮತ್ತು ಶೋಷಕರಿಗೆ ನಡುಕ ಹುಟ್ಟಿಸಿತು. 1977 ರ ಸೆಪ್ಟೆಂಬರ್ 18 ರಂದು ಅಖಿಲ ಕರ್ನಾಟಕ ದಲಿತ ಲೇಖಕ ಕಲಾವಿದರ ಯುವ ಒಕ್ಕೂಟದ ಆಶ್ರಯದಲ್ಲಿ ದಲಿತ ಸಮ್ಮೇಳನ ನಡೆಸಿ ದಲಿತ ಸಂಘರ್ಷ ಸಮಿತಿ ಬೆಳವಣಿಗೆಗೆ ಚಾಲನೆ ತಂದು ಕೊಟ್ಟ ಚಿಕ್ಕ

ಚಿಕ್ಕಮಗಳೂರಲ್ಲಿ ದಲಿತಸಮ್ಮೇಳನ

ಮಗಳೂರು ಜಿಲ್ಲೆ ಈ 5 ವರ್ಷಗಳಲ್ಲಿ ಅನೇಕ ದಲಿತ ಹೋರಾಟಗಳನ್ನು ಕಂಡಿದೆ. ದಲಿತರ ಮೇಲೆ ನಡೆವ ಯಾವುದೇ ರೀತಿಯ ಹಲ್ಲೆ, ಶೋಷಣೆಗಳನ್ನು ತಡೆಗಟ್ಟುವಷ್ಟು ಶಕ್ತಿಯುತವಾಗಿ ದಲಿತ ಸಂಘರ್ಷ ಸಮಿತಿ ಬೆಳೆದು ನಿಂತಿದೆ.

ಮಧ್ಯಾಹ್ನ 1 ಗಂಟೆಗೆ ಪಟ್ಟಣದ ಪುರಸ ಮೈದಾನದಲ್ಲಿ ಸಂಘರ್ಷ ಸಮಿತಿ ರಾಜ್ಯ ಸಂಚಾ ಬಿ. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಬಹಿರ ಸಭೆ ಎಚ್ಚರ. ಸಂಘಟನೆ ಮತ್ತು ಹೋರಾಟ ಮೂಲಕ ದಲಿತರ ಬಿಡುಗಡೆ ದಾರಿಯನ್ನು ಮೂ ಬೇಕೆಂದೂ ಹರಿಜನ ಕೇರಿಯೆಂದರೆ ಕಾಂಗ್ರೆ ಗು ಗೆಯ ಮತ ಪೆಟ್ಟಿಗೆಯಲ್ಲವೆಂದೂ, ಈ ಭ್ರ ಚುನಾವಣೆಯನ್ನು ಭಹಿಷ್ಕರಿಸಿ ರಾಜಕಾರಣಿಗ ಪಾಠ ಕಲಿಸಬೇಕೆಂದೂ ನಿರ್ಣಯಿಸಿತು.

— ಸುಂದ್ರ

ಸರಕಾರಿ ಜಾಹಿರಾತು : ಸರಿಯೆ ?

ಸಂಪಾದಕರ ಸ॥ ಕ್ಕೆ

ತಾವು ನೇರವಾಗಿ, ತೀಕ್ಷ್ಣವಾಗಿ ಸರ್ಕಾರದ ಹೊಣೆಗೇಡಿತನವನ್ನು ಬಯಲಿಗೆಳೆಯುತ್ತಿರುವಿರಿ. ಸ್ತುತ್ಯವಾದ ಕಾರ್ಯ. ಅದು ಹೆಚ್ಚಿನ ಮಟ್ಟದಲ್ಲಿ ನಿರೀಕ್ಷಿಸುವುದು ಚಿಂತನಾಶೀಲರೆಲ್ಲರ ಕರ್ತವ್ಯ. ಅದು ಮುಂದುವರಿಯಲಿ.

ಭ್ರಷ್ಟ ಸರ್ಕಾರವೆಂದು ಶಿರೋನಾಮೆ ಕೊಟ್ಟು "ದುರ್ಬಲ ವರ್ಗದ ಏಳಿಗೆಗಾಗಿ ಹತ್ತಾರು ಕಾರ್ಯಕ್ರಮಗಳು" ಎಂಬ ಜಾಹೀರಾತು (ಪ್ರಕಟಣೆ-ವಾರ್ತಾ ಇಲಾಖೆ) ಪ್ರಕಟಿಸುವುದು, ಸೂಕ್ತವಾದುದೆ?

ವ್ಯಕ್ತಿ, ಸಂಘ, ಸಂಸ್ಥೆಗಳು, ದಲಿತರ ಹಿತ ಚಿಂತಕರು, ಮುಂತಾದವರಿಂದ ಜಾಹೀರಾತು ಪಡೆದು, ಆರ್ಥಿಕ ಸಮಸ್ಯೆಯನ್ನು ಪೂರೈಕೆ ಮಾಡಿ ಕೊಳ್ಳಬಹುದಲ್ಲವೆ?

—ಪ್ರಧಾನ ಕಾರ್ಯದರ್ಶಿ
ವಿಶ್ವಶಾಂತಿ : ಸಂಸ್ಥೆ, ರತ್ನಪುರಿ

ಸರ್ಕಾರದಿಂದ ಜಾಹೀರಾತು ಪಡೆದ ತಪ್ಪಿಗೆ ಸರ್ಕಾರದ ನಾಯಿಯಾಗುವುದಿಲ್ಲ ಎಂಬಷ್ಟು ಸ್ವಾಭಿಮಾನ ಇರುವುದರಿಂದಾಗಿ ಸರಕಾರಿ ಜಾಹೀರಾತು ಪ್ರಕಟಿಸುತ್ತಿದ್ದೇವೆ. ಅಲ್ಲದೆ ಸರಕಾರದ ಬೊಗಳೆ ಜಾಹೀರಾತುಗಳು ಮತ್ತು ನಾವು ಪ್ರಕಟಿಸುವ ಸತ್ಯಸಂಗತಿಗಳು ಒಂದೇ ಕಡೆ ಇದ್ದರೆ ಓದುಗರ ಚಿಂತನೆಗೆ ಇದು ಪೂರಕವೇ ಆಗುತ್ತದೆಯಲ್ಲವೆ?

-ಸಂಪಾದಕ

ಪ್ರತಿಕ್ರಿಯೆ

'ಜೈಹಿಂದ್ ಹೆಗಡೆ'

ಜನವರಿ 10ರಂದು ಪ್ರಮಾಣವಚನ ಸ್ವೀಕರಿಸಿದ ನಮ್ಮ ಜನತಾ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ಅಂದು ಸಂಜೆ 9-15ಕ್ಕೆ ಆಕಾಶವಾಣಿಯಲ್ಲಿ ಜನರನ್ನುದ್ದೇಶಿಸಿ ಪ್ರಪ್ರಥಮವಾಗಿ ಭಾಷಣಮಾಡಿದರು. ಹೆಗಡೆಯವರ ಮಾತುಗಳನ್ನು ಅತ್ಯಂತ ಕುತೂಹಲದಿಂದ ಕೇಳತೊಡಗಿದೆ. ಭ್ರಷ್ಟಾಚಾರವಿಲ್ಲದ ಸ್ವಚ್ಛ ಪ್ರಾಮಾಣಿಕ ಆಡಳಿತ ಕೊಡುತ್ತೇನೆಂದೂ ಬಡತವ ನಿರುದ್ಯೋಗಗಳನ್ನು ಬಗೆಹರಿಸಲು ಪ್ರಯತ್ನಿಸುತ್ತೇನೆಂದು ಆವೇಶವಿಲ್ಲದೆ ಮಾತನಾಡಿದ ಶ್ರೀ. ಹೆಗಡೆ ಕೊನೆಗೆ 'ಜೈಹಿಂದ್' ಎಂದು ತಮ್ಮ ಭಾಷಣ ಮುಗಿಸಿದರು. ಇವರಿಂದ ಜಾತಿ ಧರ್ಮಗಳನ್ನ ಮೀರಿದ ಕ್ರಾಂತಿಕಾರಿಕ ಧೋರಣೆಯನ್ನು ನಿರೀಕ್ಷಿಸಿದ್ದ ನನ್ನ ಎದೆಗೆ ಚೂರಿ ಹಾಕಿದಂತಾಯ್ತು. ಗಡ್ಡದಾರಿ ಬ್ರಾಹ್ಮಣ ಹೆಗಡೆಯ ಕಂಕುಳಲ್ಲಿ ಜನಿವಾರ ಎಂಬ ವಿಷನಾಗರ ಕಾಣಿಸಿದಂತಾಯ್ತು.

ನಸೀರ್ ಅಹಮದ್, ಭದ್ರಾವತಿ

ಸರಳ ಅನುಮಾನ

'ವಿಚಾರವಾದಿಯ' ಕೌರ್ಯ' ಸರಳಾ ಪುರಾಣಿಕರ ಬಗ್ಗೆ ಅನುಮಾನ ಮೂಡಿಸುವಂತಿದೆ. 'ವಿಚಾರವಾದಿ'ಯ ಮದುವೆ ಬೇರೆ ಹೆಣ್ಣಿನೊಂದಿಗೆ ನಿರ್ಧಾರವಾಗಿದೆ ಎಂದು ತಿಳಿದೂ ಹೀಗೆ ಸರಳಾ ಅವರು ಮುಂದುವರಿಯಬಾರದಿತ್ತೇನೊ ಎನಿಸುತ್ತದೆ ಜೊತೆಗೆ ಬಲವಂತವಾಗಿ ಫೋಟೊ ತೆಗೆಸಿದುದರ ಹಿನ್ನೆಲೆ ಏನು?

ನಾಗರಾಜು, ಬೆಂಗಳೂರು

ಗುಂಡೂರಾಯನ ಗೋರಿ

ಕರ್ನಾಟಕ ದಲಿತ ಸಂಘರ್ಷಸಮಿತಿಯ ಕಾರ್ಯಕರ್ತ ತಾವು ಭೇಟಿ ಇತ್ತು ಪ್ರತಿಹಳ್ಳಿಯಲ್ಲೂ ಕಾಂಗ್ರೆ ಸರಕಾ ಭ್ರಷ್ಟತೆ ಗುಂಡೂರಾಯನ ಗೂಂಡಾಗಿರಿ, ದಲಿತರ ಮೇ ದೌರ್ಜನ್ಯಗಳ ಮೇಲೆ ಹಾಡುಗಳನ್ನು ಹಾಡಿ ಜನರನ್ನು ಸುವುದರ ಜೊತೆಗೆ ಕಾಂಗ್ರೆ ಸಂಸ್ಕೃತಿಯ ವಿರುದ್ಧ ರೆ ಮೂಡಿಸುತ್ತಿದ್ದರು. ಜನ... ಳನ್ನು ಮೊಳಗಿಸುತ್ತಾ, ಗುಂಡೂರಾಯನ ಗೂಂಡಾ... ಗೋರಿಕಟ್ಟಲು ಜನತೆಗೆ ಕರೆ ಕೊಡುತ್ತಿದ್ದರು. ಈ ಓಗೊಟ್ಟ ಜನ ಚುನಾವಣೆಯಲ್ಲಿ ಗುಂಡೂರಾ... ಕೀಯ ಗೋರಿ ಕಟುವುದರ ಜೊತೆಗೆ ಕಾಂಗ್ರೆ... ಯನ್ನು ನಾಶಮಾಡುವತ್ತ ದಿಟ್ಟ ಹೆಜ್ಜೆ ಹಾಕಿ... ಕಾರಕ್ಕೆ ಬಂದಿರುವ ಹಾಲಿ ಜನತಾಪಕ್ಷ ... ಆಡಳಿ... ಭ್ರಷ್ಟಾಚಾರ. ಪಕ್ಷಾಂತರ, ಅಧಿಕಾರಕ್ಕಾಗಿ ಕಚ್ಚಾಟ... ದಲಿತರ ಮೇಲಿನ ಹಲ್ಲೆಗಳಿಗೆ ಪ್ರತ್ಯಕ್ಷ ಪರೋಕ್ಷವಾಗಿ... ನೀಡಿದ್ದೇ ಆದರೆ ಕಾಂಗ್ರೆಗಾದ ಗತಿಯೇ ಜನತಾ... ತ್ತದೆ ಎಂದು ಜನ ಎಚ್ಚರಿಸುತ್ತಿದ್ದಾರೆ.

— ಕೆ. ಎನ್. ಗುರುಪ್ರಸಾದ್ ಕೆರೆಗೆ

ವಿಷಾದ-ಸಿಟ್ಟು

ಜನವರಿ 5, 1983ರ 'ಪಂಚಮ' ಸಂಚಿಕೆಯ... ವಾದ 'ವಿಚಾರವಾದಿಯ ಕ್ರೌರ್ಯ' ಎಂಬ ... ಒಂದು ರೀತಿಯಲ್ಲಿ ನನಗೆ ವಿಷಾದವೆನಿಸಿದರೂ ... ರೀತಿಯಲ್ಲಿ ವಿಚಾರವಾದಿಯ ವಿಚಾರ ತಿಳಿ... ವಿಚಾರವಾದಿ, ಎಂದು ಟ್ರೀಟ್ ಮಾಡಿದ್ದ... ಸ್ತ್ರೀ ಸ್ವಾತಂತ್ರ್ಯವನ್ನು ಹೇಳುತ್ತಲೇ. ಸ್ತ್ರೀಯ... ಯಂತೆ ಕಾಣುವ 'ವಿಚಾರ ವಾದಿಗಳು' ... ದಪ್ಪಿದ್ದಾರೆ.

—ಜಿ. ಸಿ. ಶೇಖರ್,

ಗೌರಿಬಿದನೂರು: ಒಂದು ಅಸ್ಪೃಶ್ಯ ಹಾಸ್ಟಲಿನ ಕಥೆ

ಗೌರೀಬಿದನೂರಿನಲ್ಲಿ ಕಾಲೇಜು ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯ ಪ್ರಾರಂಭಿಸಬೇಕೆಂದು ದಲಿತ ಸಂಘರ್ಷಸಮಿತಿ ದಿ. 12. 8. 1982ರಂದು ತಾಲ್ಲೂಕ್ ಆಫೀಸ್ ಮುಂದೆ ಧರಣಿ ಸತ್ಯಾಗ್ರಹ ಹೂಡಿದ್ದೆ ತಡ, ಇಡೀ ಊರಿನಲ್ಲಿದ್ದ ಜಾತಿವಾದಿ ಶಕ್ತಿಗಳು, ಮನೆ ಮಾಲೀಕರು, ರಾಜಕೀಯ ವ್ಯಕ್ತಿಗಳು, ಕೆಲವು ದಲಿತ ಪುಡಾರಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಎಷ್ಟು ಸಾಧ್ಯವೋ ಅಷ್ಟೆಲ್ಲಾ ಪ್ರಯತ್ನ ಪಟ್ಟು ಕೊನೆಗೆ ನಾಯಿ ಬಾಲದಂತೆ ತಮ್ಮ ಬಾಲವನ್ನು ಮುದುರಿಕೊಂಡು ಸುಮ್ಮನಾದವು. ಕೊನೆಗೆ ಇದು ಯಾವ ರೀತಿ ದುಷ್ಟ ಶಕ್ತಿಗಳು, ಜಾತಿವಾದಿ ಮುಖಂಡರು, ನಿರ್ಲಕ್ಷ್ಯ ಸರ್ಕಾರಿ ಅಧಿಕಾರಿಗಳ ಕಿರುಕುಳಗಳ ಮಧ್ಯ ಪ್ರಾರಂಭವಾಯಿತು ಎಂಬುದನ್ನು 'ಪಂಚಮ' ಓದುಗರ ಮುಂದಿಡಲು ಇಷ್ಟ ಪಡುತ್ತೇನೆ.

ತಹಸೀಲ್ದಾರ ರವರಿಗೆ ಮನವಿ ಕೊಡುವುದರ ಮುಖಾಂತರ ಪ್ರಾರಂಭವಾದ ಧರಣಿಯಲ್ಲಿ ಸುಮಾರು 50 ಕ್ಕಿಂತ ಹೆಚ್ಚಿನ ದಲಿತ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶುರುವಾಯಿತು ಆಶ್ವಾಸನೆಗಳ ಸುರಿಮಳೆ. ಮಳೆ ಇಲ್ಲದ ಈ ಗೌರೀಬಿದನೂರಿನ ತಾಲ್ಲೂಕು ಕಛೇರಿಯ ಮುಂದೆ ಹಲವಾರು ಹೇಳಿಕೆಗಳಂತು ಬಹಳ [illegible]ವಂತಹವಾಗಿದ್ದವು. 'ಅಯ್ಯೋ ಯಾಕಪ್ಪ ನೀವು ನಮಗೆ ಮೊದಲೆ ತಿಳಿಸಿದ್ದರೆ ನಾವ್ ಮಾಡಿಸ್ ಬುಡುತ್ತಿದ್ದಿವಿ' ಎಂದರು ಕೆಲವು ರಾಜಕೀಯ ಮುಖಂಡರು. ಸಮುದಾಯ ಮಿತ್ರರು ಮತ್ತು ಸರ್ವೋದಯ ನಾಯಕರು ನಮಗೆ ಪೂರ್ಣವಾಗಿ ಸಹಕರಿಸಿದರು. ಧರಣಿ ಪ್ರಾರಂಭವಾದ ಮೂರು ದಿನಗಳ ನಂತರ ಆಗಸ್ಟ್ 15 ಬಂತು. ನಾವು ಮತ್ತು ಸಮುದಾಯ ಮಿತ್ರರು ಉಳ್ಳವರ, ಜಮೀನ್ದಾರರ, ಭೂಮಾಲಿಕರ ಸ್ವತಂತ್ರ ದಿನಾಚರಣೆಯನ್ನು ಕರಾಳ ದಿನಾಚರಣೆಯಾಗಿ "ಯಾರಿಗೆ ಬಂತು, ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ" ಎಂಬ ಕ್ರಾಂತಿ ಗೀತೆಯೊಂದಿಗೆ ಪ್ರಾರಂಭಿಸಿದೆವು. ತ್ರಿವರ್ಣ ಧ್ವಜದ ಪಕ್ಕದಲ್ಲಿ ಗುಡಾರದ ಮೇಲೆ ಕಪ್ಪು ಬಾವುಟ ಹಾರಾಡುತ್ತಿತ್ತು. ಆ ದಿನ ಸಂತೆ ಇದ್ದುದರಿಂದ ಹಳ್ಳಿ ಜನರ ಗುಂಪು ನಮ್ಮ ಸುತ್ತಲು ಆವರಿಸಿತ್ತು. ಎಂದೂ ಕೇಳದ, ಕಾಣದ, ಇವರು ನಮ್ಮ ಹಾಡುಗಳನ್ನು ಕಣ್ಣು ಬಾಯಿ ಬಿಟ್ಟುಕೊಂಡು ಒಂದೇ ಸಮನೆ ನೋಡುತ್ತಿದ್ದರು. ಕೆಲವರು ತಮ್ಮ ನೋವುಗಳನ್ನು ನಮ್ಮ ಜೊತೆ ಹಂಚಿಕೊಳ್ಳುತ್ತಿದ್ದರು. ಒಂದಡೆ ಸಂಭ್ರಮದಿಂದ ಬೀದಿ. ಬೀದಿಯಲ್ಲಿ ಬಣ್ಣ ಬಣ್ಣದ ಬಟ್ಟೆಗಳನ್ನು ಧರಿಸಿ, ಭಾರತ್‌ಮಾತಾಕೀ ಜೈ, ಗಾಂಧಿ ಕೀ ಜೈ. ವಂದೇ ಮಾತರಂ ಎಂದು ಮುಗ್ಧ ಬಾಲಕರು ಹೋಗುತ್ತಿದ್ದರು. ಇನ್ನೊಂದೆಡೆ ನಮ್ಮ ಕಪ್ಪು ಬಾವುಟ ಪ್ರದರ್ಶನ ಬಡವರ ಒಡಲಿನ ನೋವಿನ ಹಾಡುಗಳು. ಸುಮಾರು ಆರು ದಿನಗಳ ನಂತರ ಡಿ. ಸಿ. ಯವರು ಗಮನ ಹರಿಸಿ 10 ದಿನಗಳೊಳಗಾಗಿ ಪ್ರಾರಂಭಿಸುವುದಾಗಿ ತಿಳಿಸಿದರು. ಅವರ ಮಾತಿಗೆ ಮನ್ನಣೆ ನೀಡಿ ಧರಣಿ ವಾಪಸ್ ತೆಗೆದುಕೊಂಡೆವು.

ಧರಣಿ ವಾಪಸ್ ತೆಗೆದು ಕೊಂಡ ಒಂದೆರಡು ದಿನದ ನಂತರ ಒಂದು ಹೊಸ ಬಿಲ್ಡಿಂಗ್ ಕೊಡುವುದಾಗಿ ಒಬ್ಬ ಶೆಟ್ಟಿ ಬಂದು ತಿಳಿಸಿದ. ನಮಗೆ ಅದನ್ನು ಕಂಡು ಬಹಳ ಸಂತೋಷವಾಯಿತು. ಸುಮಾರು 700ರೂ ಬಾಡಿಗೆ ಮಾತಾಡಿ ನಿಲಯ ಬೇಗ ಪ್ರಾರಂಬಿಸಬೇಕೆಂದು ನಾವು ಇನ್ನಿತರ ಸಮಸ್ಯೆಗಳ ಬಗ್ಗೆ ಗಮನ ಹರಿಸಿದಾಗ ಸಂಜೆ ಬಂತು ಗ್ರಹಚಾರ. "ನೋಡಿ ನಮ್ ಬಿಲ್ಡಿಂಗ್ ಹಾಸ್ಟಲ್‌ಗೆ ಕೊಡುವುದಿಲ್ಲ ನಮ್‌ಮನ್ಯಾಗ ನನ್ ಹೆಂಡ್ತಿ ಮಕ್ಳು ಒಪ್ಲಿಲ್ಲ" ಎಂದು ಆತ ಉದ್ಗಾರ ತೆಗೆದ. SC, ST ಹಾಸ್ಟಲ್ ಎಂದ ತಕ್ಷಣವೇ ತಿಂದಿದ್ದಲ್ಲೆ ಕಕ್ಕುವಂತಾಯಿತು ಅವರ ಮನೆಯವರಿಗೆ. ಹೋಗಲಿ ಅಂತಾ ನಾವು ಮತ್ತು SWI ಗೌರೀಬಿದನೂರಿನ ಪ್ರತಿಗಲ್ಲಿಗಲ್ಲಿಗಳಲ್ಲಿ, ಊರಿನ ಸುಮಾರು ಸುತ್ತಮುತ್ತ ತಿರುಗಾಡಿ ಕೊನೆಗೆ ಹೊಗೆಸೊಪ್ಪಿನಗೋಡೆನ್ ಖಾಲಿ ಇರುವ ಸುಳಿವು ಸಿಕ್ಕಿ ಅದರ ಯಜಮಾನರಿಗೆ ಪತ್ರಗಳನ್ನು ರವಾನಿಸಿದೆವು. ಒಂದಕ್ಕೂ ಉತ್ತರ ಬರಲಿಲ್ಲ. ನಾವು ಕೊಟ್ಟ ಅವಧಿ ಮುಗಿಯುತ್ತಾ ಬಂತು. BDO ರವರನ್ನು ರೇಗಾಡಿದ್ದಕ್ಕೆ ಆ ದಿನ BDO ತಹಸೀಲ್ದಾರ್ ಮತ್ತು ಇನ್ನಿತರ ಅಧಿಕಾರಿಗಳು ಹೋಗಿ ಒಂದು ಮಂಟಪನೋಡಿದ್ದವೆ. ಅದು ಶ್ರೀರಾಮ ದೇವಸ್ಥಾನ, ಹಿಂದೆ ಲಿಂಗಾಯಿತರ ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಿದ್ದರಂತೆ, ನೀವು ನೋಡಿಕೊಂಡು ಬನ್ನಿ, ಎಂದು ತಿಳಿಸಿದಾಗ, ಅದನ್ನು ಕಂಡು ನಮಗೆ ಬೇಸರವಾಯಿತು. ಅದು ದೇವಾಸ್ಥಾನ ಅಲ್ಲಾ 'ಹಾಳುಮಂಟಪ' ಅದಲ್ಲದೆ ಸುಮಾರು 2 ಕಿ. ಮೀ. ದೂರ ಕಾಲೇಜಿಗೆ ನಾವು ಒಪ್ಪಲಿಲ್ಲ. ನೀವು ಒಪ್ಪಿಕೊಳ್ಳಿ ಸದ್ಯಕ್ಕೆ ಪ್ರಾರಂಬಿಸೋಣ ನಂತರ ಯಾವುದಾದರೂ ಏರ್ಪಾಡು ಮಾಡೋಣ ಎಂದುತಿಳಿಸಿ ಆ ದಿನ DSWO ಗೆ ಆರ್ಡರ್ ಬರೆಸಿ ಕಳುಹಿಸಿದರು. ವಿದ್ಯಾರ್ಥಿಗಳು, ನಮಗೆ ಆ ಹಾಳು ಮಂಟಪಬೇಡ, ಅದು ದೆವ್ವಗಳ ವಾಸದ ಮಂಟಪವಾಗಿದೆ ಎಂದು ಗಲಾಟೆ ಮಾಡಿದರು. ನಂತರ BDO ರವರು ಹೊಗ್ಲಿ ನಮ್ಮ TDB ಗೆ ಸಂಬಂದಿಸಿದ ಮನೆ ಇದೆ, ಅಲ್ಲೆ ಪ್ರಾರಂಬಿಸೋಣ ಎಂದುತಿಳಿಸಿದರು.

ಸುಮಾರು 15–16 ದಿನಗಳಾಯಿತು. ಈಗ ಸ್ಕಾಲರ್‌ಶಿಫ್ ಬಿಡುಗಡೆಯಾಗುವುದಿಲ್ಲ ಮುಂದಿನ ತಿಂಗಳು ಒಂದನೇ ತಾರೀಖು ಗ್ಯಾರಂಟಿಯಾಗಿ ಪ್ರಾರಂಬಿಸೋಣ. ನೀವು ಪ್ರವೇಶ ಪತ್ರಗಳನ್ನು ಹಾಕಿ. ಅಷ್ಟರೊಳಗೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳುತ್ತೇವೆ. ಎಂದು BDO ಸಾಹೇಬರು ತಿಳಿಸಿವರು. ಇದರ ಮಧ್ಯೆ ಒಬ್ಬ ದಲಿತೋದ್ಧಾರಕ ಸಿಕ್ಕಿ 'ಈಗ ಒಂದು ಹೊಸ ಬಿಲ್ಡಿಂಗ್ ರೆಡಿಯಾಗಿದೆ ಅದನ್ನು ನಾನು ಕೊಡಿಸುತ್ತೇನೆ. ನೀವು ಈಗ್ಗೆ ಪ್ರಾರಂಬಿಸಿ ಎಂದು ತಿಳಿಸಿದ. ನಮಗೆ ಎಲ್ಲಿಲ್ಲದ ಸಂತೋಷವಾಯಿತು. ಈಗ ಯಜಮಾನಊರಲ್ಲಿ ಇಲ್ಲಾ, 1 ಗಂಟೆಗೆ ಬರ್ತಾನೆ. ನಾವು ಮತ್ತು BDO ಅಗ್ರಿಮೆಂಟ್ ಮಾಡಿಸೋಣ. ನೀವು ನಾಲ್ಕು ಗಂಟೆಗೆ ಬನ್ನಿ ಎಂದ. ನಾವು ನಾಲ್ಕು ಗಂಟೆಗೆ ಬಂದು ಆ ಉದ್ಧಾರಕನನ್ನು ಕಂಡಾಗ ನಿದಾನವಾಗಿ ತಿಳಿಸಿದ "ಎಕ್ಸ್‌ಕ್ಯೂಸ್ ಮೀ ಸ್ವಲ್ಪದರಲ್ಲಿ ಕೈತಪ್ಪಿತು" ಎಂದು ಹೊರಟು ಹೋದ ನಮಗಂತು ಬಹಳ ಬೇಸರವಾಯಿತು.

ಇಷ್ಟಾಗಿಯೂ ಕೊನೆಗೆ ಒಂದು ಪುಟ್ಟ ಮನೆ ಹುಡುಕಿ ಹಾಸ್ಟಲ್ ಪ್ರಾರಂಭಿಸಿದೆವು. ಇದರಿಂದ ನಮಗೆ ನಮ್ಮ ಸ್ಥಿತಿಯು ತುಂಬಾ ಅರ್ಥವಾಯಿತು. ಒಂದು ಕಡೆ ಜಾತಿವಾದಿ ಶಕ್ತಿಗಳನ್ನು, ಇನ್ನೊಂದೆಡೆ ನಮ್ಮ ದಲಿತೋದ್ಧಾರಕರನ್ನು ಮತ್ತೊಂದು ಕಡೆ ಸರ್ಕಾರಿ ನಿರ್ಲಕ್ಷ ಅಧಿಕಾರಿಗಳನ್ನು ಎದುರು ಹಾಕಿಕೊಂಡು ದಿನಾಂಕ 16-1 -82 ರ ಸೋಮವಾರ 2-45ಕ್ಕೆ ಊಟ ಶುರುವಾಯಿತು.

'ದಲಿತ' ಗೌರಿಬಿದನೂರು.

ಕೋಟೆಯಲ್ಲಿ ಸಂಘರ್ಷ ಸಮಿತಿ

ಹೆಗ್ಗಡದೇವನ ಕೋಟೆ ದಲಿತರ ಪಾಲಿಗೆ ಮೇಲ್ಜಾತಿಯವರ ಜಮೀನ್ದಾರರ ದಬ್ಬಾಳಿಕೆಯ ಕೋಟೆಯಂತಿದೆ, ಇಲ್ಲಿಯೂ ಈಗ ಸಂಘರ್ಷ ಸಮಿತಿ ಹುಟ್ಟಿ ಜಾತ್ಯಾಂಧರಿಗೆ ಸಿಂಹಸ್ವಪ್ನವಾಗತೊಡಗಿದೆ 21–12–82 ರಂದು ಮೆರವಣಿಗೆ ಮತ್ತು ಬಹಿರಂಗ ಸಭೆಯೊಡನೆ ಪ್ರಾರಂಭವಾಗಿರುವ ದಲಿತ ಸಂಘರ್ಷಸಮಿತಿಯ ಶಾಖೆಯ ಸಂಚಾಲಕರಾಗಿ ಚೆಟ್ಟಯ್ಯನವರು ಆಯ್ಕೆಯಾಗಿದ್ದಾರೆ.

ಒಂದು ಸಣ್ಣ ಕತೆ

ಉಗ್ರ ನರಸಿಂಹ

ಸಂಜೆ ಆದ್ರೆ ಕಾಗೆಗಳ ಕಾಟ, ರಾತ್ರಿ ಆದ್ರೆ ಗೂಬೆಗಳ ಕೂಗು, ಸೊಳ್ಳೆಗಳ ಕಾಟಕ್ಕೆ ದನಗಳ ಪಟ-ಪಟ ಕಿವಿಬಡಿತ, ನಾಯಿಗಳ ಗೊಳ್ಳಿಕ್ಕು. ಮಣ ಮಣ ದೀಪದ ಬೆಳಕಲ್ಲಿ 'ದೇವರೇ ಕಾಪಾಡು' ಎನ್ನುವ ಅಮ್ಮನ ಉಸಿರಾಟ. ಬೆಳಗಾದರೆ ಬಿಕೊ ಅನ್ನುವ ಬೀದಿಬಾಗಿಲು, ಓಡಾಡುವ ಜನರ ಓರೆ ಗಣ್ಣೋಟ, ಮಂಕ್ರಿ ಗುದ್ದಲಿಗಳಿಂದ, ಮಚ್ಚು ದೊಣ್ಣೆಗಳಿಂದ ಇಳಿಬಿದ್ದ ಕೈಗಳ ಓಡಾಟ, ಅಮ್ಮನ ಅಸ್ಥಿಪಂಜರ ಹೊರಕ್ಕೂ ಒಳಕ್ಕು ಬಡಿದಾಡಿ ಕೊಂಡು ಓಡಾಡುತ್ತಿತ್ತು, ಬದುಕಿಗೆ ಪರದಾಟ ಮಾಡುತ್ತಿತ್ತು.

ಕಂಬ್ಳಿಕೊಪ್ಪೆಯಲ್ಲಿ ಅಡಗಿದ್ದ ದೃಢಕಾಯದೇಹ ದ ಕೈಯಲ್ಲಿದ್ದ ಮೆಟ್ಟು ಹಾಳುಬಿದ್ದ ಪಾಳೆ ಗಾರರ ಕೋಟೆಯ ಮೇಲೆ ಕೂತು ನೋಡುವ ರಣಹದ್ದಿ ನಂತೆ ಬೇಟೆಗಾಗಿ ಹೊಂಚು ಹಾಕುತ್ತಿತ್ತು. 'ಬರಲಿ ಆ ಶಾನುಭೋಗ, ಮೆಟ್ನಾಗಾಕಿ ಬಿಡ್ತೀನಿ' ಅಂತ ೧೫ ಹಳ್ಳಿಯಲ್ಲು ತಮಟೆಬಡಿದು ಸಾಕಾಗಿತ್ತು, ಅನ ಕ್ಷರತೆಯ ಬೇಕಿಯಲ್ಲಿ ಬೇದಿದ್ದ ಅಪ್ಪನ ಮನಸ್ಸು ಮಕ್ಕಳ ಎದೆಯಲ್ಲಿ ವಿದ್ಯಾಜ್ಯೋತಿ ಹತ್ತಿಸಲು ಹಾತೊರೆಯುತ್ತಾ ಛಲ–ನಿರ್ಧಾರಗಳು ಬರಸೆಳೆ ದಿತ್ತು ಅದಕ್ಕಾಗಿ ಸರ್ವತ್ಯಾಗ ಮಾಡಲು ನಿರ್ಧ ರಿಸಿದಂತಿತ್ತು.

ಗುಡ್ಡಗಳ ನಡುವೆ ಕರಡಿಕಾಟ ತಪ್ಪಿಸಿಕೊಂಡು ಕಾಡು ಸೀಳಿಕೊಂಡು ಬಂದರೆ 'ಮಂಚಲದೊರೆ' ಗುಬ್ಬಿ ತಾಲ್ಲೋಕಿನ ಒಂದು ಗ್ರೂಪ್ ಪಂಚಾಯ್ತಿ ಸರ್ಕಾರಿ ಶಾಲೆ ರಿಪೇರಿ ಇದುದ್ದರಿಂದ, ಕಾಗೆ ಗೂಬೆಗಳು ತೂರಾಡುತ್ತಿದ್ದ ಹಾಳು ಹನುಮಂತನ ಗುಡಿಯ ಕಲ್ಲುಕಂಬ ಕೊರಕೊಂಡು ಅಡ್ಡ ಮಲ ಗಿದ್ದ ದಾಟುಗಂಬದಾಚೆಯ ಒಂದು ಮೂಲೆಯಲ್ಲಿ ನಮ್ಮ ವಿದ್ಯಾಭ್ಯಾಸ. ಆ ದಿನವು ತೇಗುತ್ತಾ ಒಂದು ದಾಟುಗಂಬ ದಾಟುತ್ತಾ ಶಾನುಬೋಗ 'ಏನ್ರಲಾ ಕೆಂಪ–ರಂಗ ಇವತ್ತೇನು ಬೀಳು (ಸತ್ತ ದನ) ಗೀಳು ಬಿದ್ದಿಲ್ವೆನ್ರಲಾ ಸ್ಕೂಲಿಗೆ ಬಂದಿ ದ್ದೀರ' ಅಂತಿದ್ದಂಗೆ ನನ್ನ ಪುಸ್ತಕಗಳು ಹರಿದು ಬಿದ್ದವು ಸ್ಲೇಟು ಚೂರು ಚೂರಾಯಿತು ತಲೆ ಗೂದಲು ಕೆದರಿ ಮೈ ಮಾಂಸವೆಲ್ಲಾ ಹರಿದು ಬಟ್ಟೆ ಒಳಗೆ ಜೋತಾಡಿ ಕೊಂಡು ಮನೆ ಸೇರಿದವು. ಅಪ್ಪನ ಕೈಯಪ್ಪಿಗೆಯಲ್ಲಿ ಕೂಡಿ ಕೊಳ್ಳುತ್ತಿದ್ದವು. 'ಯಾಕಪ್ಪ ಯಾರಪ್ಪ' ಅಂದಾಗ ಆ ಶಾನುಭೋಗ ಇಂಗಂದ ಎನ್ನುತ್ತಿದ್ದಂಗೆ 'ಉಘ್ರನರಸಿಂಹನ ಕೈ ಯಲ್ಲಿ ಮೆಟ್ಟೆತ್ತು ಊರಬಾಗಿಲು ಸೇರಿತು. ಏನ್ ನರಸುಮಣ್ಣ ಇಲ್ಲಿ ಅಂದ್ರೆ ಏನಿಲ್ಲ ಕಣ್ರಪ್ಪ ಆ ಶಾನುಬೋಗ ಈ ಕಡೇ ಬತ್ತಾನೇನೋ ಅಂತ ಕುತಿದ್ದೀನಿ' ಅಂತಿದ್ರು.

ಕೊನೆಗೂ ಪುಸ್ತಕ, ಸ್ಲೇಟು, ಕೂದಲು, ಮೈ ಮಾಂಸ, ಬಟ್ಟೆ ಎಲ್ಲಾ ವ್ಯವಸ್ಥಿತವಾಗಿ ಸೇರಿ ಕೊಂಡು ಅಪ್ಪನ ಆಸೆಯ ಮಂಕ್ರಿನ ಎತ್ತಿದ ಕೂಡಲೇ ಕೋಳಿಹುಂಜಗಳು ಪುರ್ ಅಂತ ರೆಕ್ಕೆ ಬಡುಕೊಂಡು ಹಾರಿದವು. 'Please elect M. N. Kempaiah Final L L, B. as your Union President' ಎನ್ನುವ ಕರಪತ್ರ ಗೋಡೆ ಬರಹಗಳನ್ನು ನೋಡಿ ಪ್ರಥಮ ದರ್ಜೆ ಗುಮಾಸ್ತ ನಾಗಿ ತುಮಕೂರಿನಲ್ಲೆ ಇರುವ ಆ ಶಾನುಬೋಗನ ಎದೆ ದಸಕ್ ಅಂದಿರಬೇಕು. ಸುಮಾರು ತಿಂಗಳು ಗಳಿಂದಲೂ 'ಪಂಚಮ' ಚಂದದಾರನಾಗಲು ಆತ ನನ್ನ ಕೇಳುತ್ತಲೆ ಇದ್ದೇನೆ 'ಪಂಚಮ'ನ ಕೊಡು ತ್ತಲೇ ಇದ್ದೇನೆ. ಆತ ಚಂದದಾರನಾದ ಮೇಲೆ ಕಳುಹಿಸ ಬೇಕೆಂದಿದ್ದೆ ಈ ಅನುಭವವನು.

ಮಂಚಲದೊರೆ, ನ. ಕೆಂಪಯ್ಯ

ಅಪರಾಧಿ ಯಾರು: ಗಂಗ್ಯಾನಾಯ್ಕ? ಫಾರೆಸ್ಟರ್? ಇಂದಿರಾಗಾಂಧಿ?

ದಿನಾಂಕ: 18. 12. 82 ರಂದು ಚಿಕ್ಕಮಗಳೂರಿಗೆ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಚುನಾ ವಣಾ ಪ್ರಚಾರ ಭಾಷಣದ ಪ್ರಯುಕ್ತ ಭೇಟಿ ನೀಡಿದ್ದರು. ಅಮ್ಮವರ ಸ್ವಾಗತಕ್ಕಾಗಿ ಸಾಕಷ್ಟು ಜನರು ಸೇರದಿದ್ದರೂ ಪೋಲೀಸರ ಸಂಖ್ಯೆ ಮಾತ್ರ ಮುನ್ನೂರಕ್ಕೂ ಹೆಚ್ಚಾಗಿತ್ತು, ಅಲ್ಲದೆ ಶ್ರೀಮತಿ ಗಾಂಧಿಯವರ ಸ್ವಾಗತಕ್ಕಾಗಿ ಮಾಡಲ್ಪಟ್ಟ ಖರ್ಚು ಲಕ್ಷಕ್ಕೂ ಹೆಚ್ಚು. ತಳಿರು ತೋರಣಗಳ ಅಬ್ಬರ ವಂತೂ ವಿವರಿಸಲಸದಳ. ರಸ್ತೆಯುದ್ದಕ್ಕೂ ನೀಲಗಿರಿ ಕಂಬಗಳ ನೆಡುವಿಕೆ, ಬಿದಿರು ಬೊಂಬುಗಳ ಚಪ್ಪರ· ಇವುಗಳು ಅಮ್ಮನವರ ಸ್ವಾಗತಕ್ಕಾಗಿ ಏರ್ಪಡಿಸಲ್ಪಟ್ಟವುಗಳು.

ಇಲ್ಲಿ ಯೋಚಿಸಬೇಕಾದ ವಿಷಯವೆಂದರೆ ಮಂತ್ರಿವರ್ಯರ ಸ್ವಾಗತಕ್ಕಾಗಿ ಕಡಿಯಲ್ಪಟ್ಟ ಈ ನೀಲಗಿರಿ ಮರಗಳು ಮತ್ತು ಬಿದಿರು ಬೊಂಬುಗಳು ಕಾಡಿನಿಂದ ಕಡಿಯಲ್ಪಟ್ಟವುಗಳು. ಅಥವಾ ಅರಣ್ಯ ಇಲಾಖೆಯ ವತಿಯಿಂದ ಒದಗಿಸಲ್ಪಟ್ಟವು· ಏನೇ ಆದರೂ ಇವು ಯಾವುದೇ ಪರ್ಮಿಟ್ಟು ವಗೈರೆ ಇಲ್ಲದೆ ಕಾಡಿನಿಂದ ಅಕ್ರಮವಾಗಿ ಕಡಿಯಲ್ಪಟ್ಟವುಗಳು. ಮಂತ್ರಿಗಳ ಸ್ವಾಗತಕ್ಕಾಗಿ ಈ ರೀತಿ ಅಕ್ರಮವಾಗಿ ಕಡಿದರೆ ನಮ್ಮ ದೇಶದ ಅರಣ್ಯ ಸಂಪತ್ತು ನಾಶವಾಗುವುದಿಲ್ಲ. ಆದರೆ ಒಬ್ಬ ಬಡ ವನು ತನ್ನ ಸ್ವಂತ ಉಪಯೋಗಕ್ಕಾಗಿ ಇಂತದೆ ಬೆಲೆಬಾಳುವ ಮರಗಳನ್ನು ಕಡಿಯುವುದು ಹಾಗಿರಲಿ, ಕೇವಲ ಉರುವಲಿನ ಸೌದೆಯನ್ನು ಕಡಿದರೂ ನಮ್ಮ ದೇಶದ ಅರಣ್ಯವೇ ನಾಶ ವಾಗುತ್ತದೆ! ಇದು ನಮ್ಮ ದೇಶದ ಅರಣ್ಯ ನೀತಿ.


ಉದಾಹರಣೆಗೆ ದಿನಾಂಕ 21–11–82ರಂದ ತರೀ ಕೆರೆಯ ಬಳಿ ಇರುವ ಇದೇ ತಾಲ್ಲೂಕಿನ ಪೆರುಮೇನಹಳ್ಳಿ, ಲಂಬಾಣಿ ತಾಂಡ್ಯದ ವಾಸಿ ಜೋಗ್ಯನಾಯ್ಕ ಎಂಬುವರ ಮಗ ಗಂಗ್ಯಾನಾಯ್ಕ ಎಂಬುವರು ತಮ್ಮ ಮನೆಯ ಉಪ ಯೋಗಕ್ಕಾಗಿ ಸೌದೆ ಕಡಿಯಲು ಹತ್ತಿರದ ಕಾಡಿಗೆ ಹೋಗು ತ್ತಿದ್ದಾಗ, ಇನ್ನೂ ಕಾಡುತಲುಪುವ ಮೊದಲೇ ಅರ್ಧ ದಾರಿ ಯಲ್ಲೇ ಅರಣ್ಯ ಇಲಾಖೆಯವರು ಅಂದರೆ ಫಾರೆಸ್ಟರ್ ಮಂಜಪ್ಪ ಮತ್ತು ಇತರೇ ಗಾರ್ಡುಗಳು ಮೇಲ್ಕಂಡ ಗಂಗಾ ನಾಯ್ಕನನ್ನು ತಡೆದರು: ಇವನ ಜೊತೆ ಇದ್ದ ಇತರೆಯ ವರು ಓಡಿಹೋದರು. ಗಂಗ್ಯಾನಾಯ್ಕ ಮಾತ್ರ ಸಿಕ್ಕಿಕೊಂಡ. ಈತನನು ಸಾಹಸಿ ಫಾರೆಸ್ಟರ್ ಮಂಜಪ್ಪ ಮತ್ತು ಈತನ ಸಹಚರರು. ತರೀಕೆರೆ ಅರಣ್ಯ ಕಛೇರಿಗೆ ಕರೆ ತಂದರು. ಅವನನ್ನು ಚೆನ್ನಾಗಿ ಥಳಿಸಿದರು. ಅಲ್ಲದೆ 2–3 ದಿನ ಅವರ ಕಛೇರಿಯಲ್ಲೆ ಕೂಳೆ ಹಾಕಿದರು. ಕಾರಣ ತೋರಿಸುವ ಸಲುವಾಗಿ, ಸ್ವಲ್ಪ ಬಂದೂಕಿನ ಮಸಿ ಹಾಗೂ ಬ್ಯಾಟರಿ ಶೆಲ್ಲುಗಳನ್ನು ಸಿದ್ದಪಡಿಸಿಕೊಂಡರು. ಇವರು ಶಿಕಾರಿಗೆ ಹೋಡ ಕಾರಣ ಇವನನ್ನು ಹಿಡಿದಿದ್ದೇವೆ ಎಂದು ಹೇಳಲು ತಯಾರಾದರು.

ಪಾಪ ಬಡವ ಗಂಗ್ಯಾನಾಯ್ಕ ದಾರಿಕಾಣದೇ ಒದೆತಿಂದು ತೆಪ್ಪಗಾದ. ಒಮ್ಮೆ ಹೇಗಾದರೂ ಈ ರಾಕ್ಷಸರಿಂದ ತಪ್ಪಿಸಿ ಕೊಂಡರೆ ಸಾಕೆಂಬಂತೆ ಆಯ್ತು ಈತನ ಪಾಡು. 3ದಿನಗಳ ನಂತರ ಈತನ ತಂದೆಯಾದ ಡೊಗ್ಯಾನಾಯ್ಕನಿಂದ 250 ರೂ. ವಸೂಲಿ ಮಾಡಿ ಗಂಗ್ಯಾನಾಯ್ಕನನ್ನು ಯಾವ ಕೇಶೂ ಇಲ್ಲದೇ ಬಿಡುಗಡೆ ಮಾಡಲಾಯ್ತು.

ಇದರಲ್ಲಿ ನಿಜವಾದ ಅಪರಾಧಿಗಳು ಯಾರು? ಬಡವ ಹಾಗೂ ದಲಿತನಾದ ಗಂಗ್ಯಾನಾಯ್ಕನೇ? ಅಥವಾ ಈತನಿಂದ ಯಾವ ರಶೀದಿ ವಗೈರೆ ಕೊಡದೇ, ಈತನ ಬಿಡುಗಡೆಗಾಗಿ 'ದಂಡ'' ವೆಂದು 250/- ರೂ ವಸೂಲಿ ಮಾಡಿದ R. F O. ದಂಡಿನ್ ಮತ್ತು ಫಾರೆಸ್ಟರ್ ಮಂಜಪ್ಪ ಇವರು ಗಳೇ? ಅಥವಾ ಮಂತ್ರಿಗಳ ಸ್ವಾಗತಕ್ಕಾಗಿ ಲೋಡುಗಟ್ಟ ನೀಲಗಿರಿ, ಬಿದಿರು,ಬೊಂಬುಗಳನ್ನು ಕಡಿದವರೇ? ಅಥವಾ ಇದನ್ನು ಒದಗಿಸಿದ ಅರಣ್ಯಾಧಿಕಾರಿಗಳೇ? ಅಥವಾ ಇಂಥಹ ಒಂದು ಮಹತ್ವ ಸ್ಥಾನಹೊಂದಿದ ಪ್ರ॥ ಮಂತ್ರಿ॥ ಶ್ರೀಮತಿ ಗಾಂಧಿಯವರೇ? ಎಂಬುದನ್ನು ಸಾರ್ವಜನಿಕರೇ ತೀರ್ಮಾ ನಿಸಬೇಕು ಅಥವಾ ಯೋಚಿಸಬೇಕು.

ಗೋಮನಾಥ

ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಸ್ವಾಭಾವಿಕವಾಗಿ ಸಿಕ್ಕುವ ನೀರನ್ನೂ ಮುಟ್ಟಲಾರದಷ್ಟು ಭೀಕರ ಸ್ಥಿತಿಯಲ್ಲಿ ದಲಿತರು ಉಸಿರಾಡುತ್ತಿದ್ದಾರೆ. ದಲಿತ ಸಂಘರ್ಷ ಸಮಿತಿಯಂಥ ಸಂಘಟನೆಗಳೂ ಇಂಥ ಸಮಸ್ಯೆ ಬಗ್ಗೆ ರಾಜ್ಯಮಟ್ಟದ ಕಾರ್ಯಕ್ರಮ ರೂಪಿಸದೆ ಕಣ್ಣು ಮುಚ್ಚಿ ಕುಳಿತಿವೆ.



ಮಾಡುವುದು ಕೂಲಿ ಬೇಡುವುದು ನೀರು

ನಮ್ಮ ಹಳ್ಳಿಯಲ್ಲಿ ಸುಮಾರು 450 ಮನೆಗಳಿವೆ. ಅದರಲ್ಲಿ ದಲಿತ ವರ್ಗಕ್ಕೆ ಸೇರಿದ ಸವರ್ಣೀಯರೇ ಹೆಚ್ಚು. ಈ ಹಳ್ಳಿಯಲ್ಲಿ ನಮ್ಮ ಹರಿಜನಕ್ಕೆ ಸೇರಿದವು 10 ಮನೆಗಳು ಮಾತ್ರ. ಇವರು ತಲಾ ತಲಾಂತರದಿಂದಲೂ "ಮಾಡುವುದು ಕೂಲಿ, ಬೇಡುವುದು ನೀರು."

ನಮ್ಮ ಹಳ್ಳಿಯ ಹರಿಜನರಲ್ಲಿ ವಿದ್ಯಾವಂತರಿಲ್ಲ. ನಾಗರೀಕ ಸೋಂಕನ್ನೆ ಅರಿಯದ ಮುಗ್ಧ ಜನರು, ಗಂಡಸರು ದಿನವಿಡೀ ಜೀತದಾಳಾಗಿ ದುಡಿದರೆ ಹೆಂಗಸರು ಕುಡಿಯುವ ನೀರಿಗಾಗಿ ಬೇಡುತ್ತಾರೆ. ನಾನು ಆಗ ತಾನೇ ಕಾಲೇಜು ಮುಗಿಸಿಕೊಂಡು ರಜಾಕ್ಕೆ ಹಳ್ಳಿಗೆ ಹೋಗಿದ್ದೆ. ನನಗೆ ಮೂರು ದಿನದಿಂದ ಮಲೇರಿಯ ಜ್ವರ ಬಂದು ಸುಸ್ತಾಗಿದ್ದೆ. ರಾತ್ರಿ ಹೊಟ್ಟೆಗೆ ಊಟವಿಲ್ಲ, ಅರ್ಧರಾತ್ರಿಗೆ ಜ್ವರದ ಬಾಧೆಯಿಂದ ಮೈಯೆಲ್ಲ ಕೆಂಡವಾಗಿದ್ದೆ. ಗಂಟಲು ಒಣಗಿ ನೀರಿಗಾಗಿ ಹುಡುಕಾಡಿದೆ. ಮೂಲೆಯಲ್ಲಿದ್ದ ಮಣ್ಣಿನ ಅರಿವೆಯಿಂದ ನಮ್ಮ ಅಮ್ಮ ಒಂದು ಲೋಟ ನೀರನ್ನು ಬಳಿದು ತಂದು ಕೊಟ್ಟಳು. ಬೆಳಿಗ್ಗೆ ನನಗೆ ಗಂಜಿ ಕಾಯಿಸಲು ನೀರಿಲ್ಲ. 6ಗಂಟೆಗೆ ನೀರಿಗೆಂದು ಹೋದ ನಮ್ಮ ಅಮ್ಮ ಬರಲೇ ಇಲ್ಲ. ಕೊನೆಗೆ 9 ಗಂಟೆಗೆ ಪೆಚ್ಚು ಮೋರೆ ಹಾಕಿಕೊಂಡು ಬರೀ ಕೊಡವನ್ನು ತಂದಳು. ನಮ್ಮ ಹಳ್ಳಿಯಲ್ಲಿ ಸಾಕಷ್ಟು ಬಾವಿಗಳಿದ್ದರೂ, ಹರಿಜನರೆನಿಸಿಕೊಂಡ ನಮಗೆ ಆ ಬಾವಿಯನ್ನು ಮುಟ್ಟುವ ಹಕ್ಕಿಲ್ಲ. ನಮ್ಮವರು ಬಾವಿಯ ಬಳಿ ಕುಳಿತು ಅಮ್ಮಾ ... ಅಕ್ಕ ... ಎಂದು ಕೈ ಚಾಚಿ ನೀರಿಗಾಗಿ ಬೇಡುತ್ತಾ ಕುಳಿತಿರುತ್ತಾರೆ.

ಜ್ವರದ ಬಾಧೆ, ಹೊಟ್ಟೆಗೆ ಅನ್ನವಿಲ್ಲದೆ ಸುಸ್ತಾಗಿದ್ದ ನಾನು ಗೌಡರ ಮನೆಯ ಹತ್ತಿರ ಹೋದೆ. ಆದರೆ ಯಾರೂ ಇರಲಿಲ್ಲ. ಬಾವಿಯ ಹತ್ತಿರ ಹೋದೆ. ಅಲ್ಲಿ ನಮ್ಮವರ ದೀನ ಧ್ವನಿ ತಗ್ಗಿರಲಿಲ್ಲ. ಅವರನ್ನು ಕಂಡ ನನಗೆ ತಡೆಯಲಾರದ ವ್ಯಥೆಯಾಗಿ ಸಿಟ್ಟು ಬಂತು. ನನ್ನ ಸ್ವಾಭಿಮಾನವೆಂಬ ಕಟ್ಟನ್ನು ಬಿಚ್ಚಿ ನಾನು ಮಾಡಿದ ಅಪರಾಧವಿಷ್ಟೆ: ಬಾವಿಯಲ್ಲಿ ಇಳಿದು ನಮ್ಮವರಿಗೆ ನೀರು ತಂದುಕೊಟ್ಟೆ. ಮನೆಗೆ ಬಂದ ಮೇಲೆ ನನ್ನ ಅಮ್ಮ ವಿಷಯ ತಿಳಿದು ಹೆದರಿ ಗಾಬರಿಯಿಂದ ನಡುಗುತ್ತಾ ನನ್ನನ್ನು ಮನೆಯ ಒಳಗೇ ಕೂಡಿಹಾಕಿದಳು. ಅಷ್ಟರಲ್ಲಿಯೇ ಬಂದಿತು. ಊರಿನ ಸವರ್ಣೀಯರ ಸೈನ್ಯ. ಬಾಯಿಗೆ ಬಂದಂತೆ ಅರಚುತ್ತಾ, 10 ಮನೆಯ ದಲಿತರ ಮೇಲೆ ಹಲ್ಲೆ ನಡೆಸಿದರು. ಕೊನೆಗೆ ನಮ್ಮ ಮುಗ್ಧ ಜನ ತಪ್ಪಾಯಿತೆಂದು ಸವರ್ಣೀಯರ ಕಾಲಿಗೆ ಬಿದ್ದರು.

ಅದೇ ದಿನವೇ ನಾನು ನಮ್ಮ ದಲಿತರನ್ನು ಸಂಘಟನೆ ಮಾಡಿ ಮುಟ್ಟಲುಯೋಗ್ಯವಲ್ಲದ ನಮ್ಮ ಬಾವಿಯನ್ನು ಸ್ವಚ್ಛ ಮಾಡಿ ಅದನ್ನೆ ಕುಡಿಯೋಣ ಎಂದು ತೀರ್ಮಾನಿಸಿ ಎರಡು ದಿನ ಪಕ್ಕದ ಊರಿನಿಂದ ಕುಡಿಯುವ ನೀರು ತಂದು ಹಸಿದ ಹೊಟ್ಟೆಗೆ ಬರಿ ನೀರು ಕುಡಿದು ನಮ್ಮ ಬಾವಿಯನ್ನು ಸ್ವಚ್ಛ ಮಾಡಿದೆವು.

ಆದರೆ ನಮಗೆ ಇನ್ನೊಂದು ವಿಪತ್ತು ಕಾದಿತ್ತು. ಆದಿನ ಮುದಿಯಾಗಿ ಕಣ್ಣು ಕಾಣೆಸದ ಕಜ್ಜಿ ನಾಯಿಯೊಂದು ಗೌಡರ ಕೈಪಿಡಿಯಿಲ್ಲದ ಬಾವಿಗೆ ಬಿದ್ದಿದೆ. ನಿಜ ತಿಳಿಯದ ಸವರ್ಣೀಯರು ಆ ದಿನ ಬೆಳಿಗ್ಗೆ ಗಂಡಸರು, ಹೆಂಗಸರು ಎಲ್ಲಾ ಸೇರಿ ನಮ್ಮ ಮೇಲೆ ಪುನ್ಃ ಹಲ್ಲೆ ನಡೆಸಿದರು. ಇದಕ್ಕೆಲ್ಲಾ ಆ ಮಾಲಿಂಗನೇ ಕಾರಣ. ಅವನೇ ಈ ಕೆಲಸ ಮಾಡಿಸಿದ್ದಾನೆ. ಎಂದು ಎಲ್ಲಾ ತಪ್ಪನ್ನು ನನ್ನ ತಲೆಯ ಮೇಲೆ ಹೇರಿದರು, "ಅವನಿಂದ ತಪ್ಪಾಯಿತು ಎಂದು ಕ್ಷಮೆ ಕೇಳಲು ಹೇಳಿ, ಇಲ್ಲವೆ, ಕುಡಿಯುವ ಬಾವಿಯ ನೀರನ್ನು ಮಿಷನ್ನಿನಿಂದ ಖಾಲಿ ಮಾಡಿ, ಗಂಗೆ ಪೂಜೆ ಮಾಡಿಸಿ ಕೊಡಿ" ಎಂದು ನಮ್ಮವರನ್ನು ಬೇಟೆಯಾಡಿದರು. ನಮ್ಮ ಇಬ್ಬರಿಗೆ ಹೊಡೆದು ರಕ್ತ ಕಡೆಸಿದರು. ಆಗ ಬಲವಿಲ್ಲದ ನಾನು ಏನು ಮಾಡಲು ತೋಚದಾಯಿತು. ಕೊನೆಗೆ ನಮ್ಮವರು ಹೆದರಿ ನನ್ನ ಪರವಾಗಿ ತಮ್ಮ ಯಜಮಾನರು "ತಪ್ಪಾಯಿತು" ಎಂದು ಎಲೆ ಅಡಿಕೆ ಮತ್ತು ದಕ್ಷಿಣೆಯೊಂದಿಗೆ ಸವರ್ಣೀಯರ ಕಾಲ ಮೇಲೆ ಬಿದ್ದು ಹೊರಳಾಡಿದರು. ಆಗ ನಾನು ನಿಸ್ಸಹಾಯಕನಾಗಿ ಕಲ್ಲಿನ ಕಂಬದಂತೆ ನಿಂತಿದ್ದೆ ಅಪರಾದಿಯ ಸ್ಥಾನದಲ್ಲಿ.

ಇದುವರೆಗೂ ನಮ್ಮ ಘನ ಸರ್ಕಾರಕ್ಕೆ ಸಾಕಷ್ಟು ಸಾರಿ ನೀರಿಗಾಗಿ ಸಂಬಂಧ ಪಟ್ಟ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿ "ಮನವಿ" ಮಾಡಿ ಕೊಂಡರೂ ನಮ್ಮ "ನೀರಿಲ್ಲದ" ಕೊರಗು ಧ್ವನಿ ಯಾರಿಗೂ ಕೇಳುತ್ತಿಲ್ಲ. ಅಂತೂ ಪ್ರತಿದಿನ ಅದೇ ಬಾವಿಯ ಬಳಿ, ಅದೇ ದೀನ ಸ್ವರದಲ್ಲಿ ಅಮ್ಮ....ಅಕ್ಕ ಎಂದು ಕುಡಿಯುವ ನೀರಿಗಾಗಿ ಕೈ ಜೋಡಿಸುವುದರಲ್ಲಿಯೇ ಇದ್ದೇವೆ.

—ಮುದ್ದಕ್ಕನಹಳ್ಳಿ ಎನ್. ಮಹಾಲಿಂಗಪ್ಪ

ನೀರಿಗೆ ತಲೆನೀರು

ಮಂಡ್ಯ ತಾಲ್ಲೂಕು ಬಸರಾಳು ಹೋಬಳಿ, ಗುಡಿಗೇನ ಹಳ್ಳಿಯಲ್ಲಿ 60 ಹರಿಜನ ಕುಟುಂಬಗಳಿವೆ, 400ಕ್ಕೂ ಹೆಚ್ಚು ಸವರ್ಣೀಯರಿದ್ದಾರೆ. ಈ ಹಳ್ಳಿಯಲ್ಲಿ ಎರಡು ಕೊಳವೆ ಬಾವಿಗಳಿದ್ದು ಒಂದು ಹರಿಜನ ಕೇರಿಯಲ್ಲಿ ಮತ್ತೊಂದು ಸವರ್ಣೀಯರ ಕೇರಿಯ ಸಮೀಪ ಇದೆ. ಇತ್ತೀಚೆಗೆ ಹರಿಜನರ ಕೊಳವೆ ಬಾವಿ ಕೆಟ್ಟು ಹೋಗಿ ಕುಡಿಯುವ ನೀರಿಗೆ ಬವಣೆ ಪಡುತ್ತಿದ್ದಾಗ ಕೆಲವು ಹರಿಜನ ಯುವಕರು ಸವರ್ಣೀಯ ಕೊಳವೆ ಬಾವಿಯಲ್ಲಿ ನೀರು ತರಲು ಹೋದರು. ಆಗ ಅಲ್ಲಿನ ಸವರ್ಣೀಯರು "ಲೊ ಲೊ ಏನ್ರೊ ಇಲ್ಲೀಗಂಟಾ ಬಂದ್‌ಬುಟ್ರಾ ನೀವು. ಈ ನನ್‌ಮಕ್ಳು ಓದ್ಬುಟ್ರು ಅಂತ ಜಾತಿಗೀತಿ ಏನೂಇಲ್ವ....ಇವ್ರನ್ ಹಿಂಗೆ ಬಿಟ್ರೆ ನಾಳೆ ನಮ್ ಮನೆಗೂ ನುಗ್‌ತಾರೆ' ಎನ್ನುತ್ತಾ "ಲೇ ಹೊಲೆ ನನ್‌ಮಕ್ಳ ನೀರು ಬೇಕಾದ್ರೆ ಗಡಿಗೆ ತರಬೇಡಿ ಮಚ್ಚು ಕೊಡ್ಲಿ ತಗಂಡು ಬನ್ನಿ.' ನಿಮ್ಮ ತಲೆ ನೀರ ನಿಮ್ಮ ಅವ್ವದೀರ ಕೈಲಿ ಹೊರಿಸಿ ಕಳಿಸ್ತೀವಿ" ಎಂದು ಹೀನಾಮಾನ ಬೈಯ್ಯುತ್ತಾ ಹರಿಜನ ಯುವಕರನ್ನು ಚಚ್ಚಿಹಾಕಲು ಸಜ್ಜಾಗನೊಡಗಿದರು.

ಇದನ್ನು ತಿಳಿದ ಹರಿಜನ ಯುವಕರು ಮಂಡ್ಯಕ್ಕೆ ಓಡಿ ಬಂದು ದಲಿತ ಸಂಘರ್ಷ ಸಮಿತಿಗೆ ತಿಳಿಸಿದ್ದರಿಂದ ಒಂದು ರಣರಂಗ ತಪ್ಪಿದಂತಾಯ್ತು. ಪೋಲೀಸರಿಗೆ ಕೊಟ್ಟ ದೂರಿನಿಂದಾಗಿ ಹರಿಜನರಿಗೆ ಈಗ ರಕ್ಷಣೆ ದೊರಕಿದ್ದರೂ ಸವರ್ಣೀಯರ ಜಾತಿ ಬೆಂಕಿ ಇನ್ನೂ ಆರಿದಂತೆ ಕಾಣುತ್ತಿಲ್ಲ.

ಬೀದಿಗೆ ಬಿದ್ದವರೂ...ದಲಿತರೂ...

ರಕ್ತದ ಮಡುವಿನಲ್ಲಿ ಮರೆಯಾಗುತ್ತಿರುವ ಸೂರ್ಯನನ್ನೆ ದಿಟ್ಟಿಸುತ್ತಾ ಕುಳಿತಿದ್ದೆ. ಸ್ವಾಮಿ! ಸ್ವಾಮಿ! ಎಂದು ಹಿಂದಿನಿಂದ ಕರೆದಂತಾಯಿತು. ಹಿಂದಕ್ಕೆ ತಿರುಗಿ ನೋಡಿದೆ. ಚಿಂದಿಯಾದ ಸೀರೆಗೆ ತೇಪೆ ಹಾಕಿಕೊಂಡು, ಹರಿದ ರವಿಕೆಯಲ್ಲಿ ಮೈ ಮುಚ್ಚಿಕೊಂಡು, ಸುಕ್ಕುಗಟ್ಟಿದ ತಲೆಗೂದಲು ಎಣ್ಣೆ ಉಂಡೆಷ್ಟು ದಿನವಾಗಿತ್ತೊ? ಕಳೆಯಿಲ್ಲದೆ ಬತ್ತಿದ ಕಂಗಳು, ಬಾಡಿದ ಮುಖ, ಒಣಗಿದ ತುಟಿಗಳು, ಧೈನ್ಯತೆ ತೋರುವ ದೀನವಾದ ಮುಖ, ಕಡ್ಡಿಯಂತೆ ಸಣಕಲಾದ ದೇಹ, ಬತ್ತಿರುವ ಕಂಕುಳಿಗೊಂದು ಹಸುಗೂಸು ತಬ್ಬಿಕೊಂಡು, ಮುಂಗೈ ಚಾಚಿ ನಿಂತಿರುವ ಆಕೆಯನ್ನೆ ಎವೆಯಿಕ್ಕದೆ ನೋಡಿದೆ "ಸಾಮಿ ಮೂರು ದಿನದಿಂದ ಮಗೀಗೆ ಜರ ಸಾಮಿ ಒಂದ್ರುಪಾಯಿ ಕೊಡಿ ಸಾಮಿ" ಕಣ್ಣೀರು ಕಂಗಳಲ್ಲಿ ತುಂಬಿಕೊಂಡು ಕೇಳಿದಳು. "ಯಾವ ಕಡೆಯವಳಮ್ಮ" ಎಂದೆ. "ಮೂಡಸೀಮೆ ಕಡೆಯವಳು ಸಾಮಿ" ಎಂದಳು. "ನಿನ್ನ ಜೊತೆ ಯಾರು ಇಲ್ಲವಾ" ಎಂದೆ. "ದಿಕ್ಕಿಲ್ಲದವಳು ಬುದ್ಧಿ, ನಾನು ನನ್ನ ಗಂಡ ಮೂಡಸೀಮೆಯಿಂದ ಈ ಕಡೆ ಬಂದು ನಾನೆ ವರ್ಷಗಳಾದವು ಬುದ್ಧಿ. ಈ ಪಟ್ಟಣದ ಪಕ್ಕದ ಹಳ್ಳಿಯ ಸಾಹುಕಾರರ ಮನೆಯಲ್ಲಿ ನನ್ನ ಯಜಮಾನ ಜೀತ ಮಾಡುತ್ತಿದ್ದ ಬುದ್ಧಿ. ಸುಮಾರು ವರ್ಷ ಸಂದ ಮೇಲೆ ನಮ್ಮ ಯಜಮಾನನಿಗೆ ಕ್ಷಯ ಬಂದು ಕ್ಷೀಣವಾದ. ದುಡಿಸಿಕೊಂಡ ಒಡೆಯ ದುಡ್ಡು ಕೊಡದೆ ಮನೆಗೆ ಕಳಿಸಿದ. ಗಂಡ ಹಾಸಿಗೆ ಹಿಡಿದ ಮೇಲೆ ನಾನು ಅವರಿವರ ಮನೆಯ ಸಗಣಿ ಎತ್ತಿದೆ. ಬರುವ ಮೂರು ಕಾಸಿನಲ್ಲಿ ಗಂಡನಿಗಷ್ಟು ಔಷದಿ ಕುಡಿಸಿ ನಾನಷ್ಟು ಗಂಜಿ ಕುಡಿಯುತ್ತಿದ್ದೆ.

ಒಂದು ದಿನ ಸಂಕಟದಿಂದ ನರಳ್ತಾ ಇದ್ದ ಗಂಡನನ್ನು ಕಂಡು ಕರಳು ಕತ್ತರಿಸಿದಂತಾಯ್ತು, ಸಾಹುಕಾರರ ಮನೆಯ ಬಾಗಿಲಿಗೆ ಓಡಿ ಹೋಗಿ ಸಾಹುಕಾರರ ಕಾಲು ಹಿಡಿದು ಹಣ ಬೇಡಿದೆ "ನಿನ್ನ ಗಂಡ ದುಡಿದಿರೊ ದುಡ್ಡಿನ ವ್ಯಾಲೆ ಐನೂರು ಸಾಲ ಮಾಡಿದ್ದಾನೆ" ಅಂದ ಕಠಿಣವಾಗಿ "ಸಾಯುವತನಕ ನಿಮ್ಮ ಮನೆಯ ತೊತ್ತಾಗಿ ದುಡಿತಿವಿ ಗಂಡನ ಜೀವ ಉಳಿಸಿ ಹಣಕೊಡಿ" ಅಂತ ಗೋಗರೆದ. "ನಿಂಗಿ ನಿನ ಮ್ಯಾಲೆ ನೀ ಬಂದಾಗಲೆ ಗ್ಯಾನ ಇತ್ತು, ಸಮಯ ಈಗ ಕೂಡಿ ಬಂದೈತೆ, ನನಗೂ ಹೆಂಡ್ರಿಲ್ಲ, ನೀ ಸಾಯೊ ತನಕ ನನ್ನ ಸೂಳೆ ಆದ್ರೆ ನಿನ್ನ ಗಂಡನ ಪ್ರಾಣ ಉಳಿಸಬಹುದು" ಅಂದ. 'ಅಂಡಿನಿಂಡ ಹಾಳು ಸಾಹುಕಾರರ ಮನೆ ಊರು ತೊರೆದು ಈ ಪಟ್ಟಣದಾಗೆ ಕೂಳಿಗಾಗಿ ಅಲೆದಾಡಿದೆ. ಕೂಳು ಸಿಕ್ಕಿದರು ಕೂಲಿ ಸಿಗಲಿಲ್ಲ. ಮಟಮಟ ಮದ್ಯಾಹ್ನ ಉರಿ ಬಿಸಿಲು ಉರಿಯಲ್ಲಿ ಮುನ್ಸಿಪಾಲಿಟಿ ಪಾರ್ಕಿನಾಗೆ ನನ್ನ ಗಂಡ ಕೊನೆಯುಸಿರೆಳೆದಾಗ ಮುನ್ಸಿಪಾಲಿಟಿಯವರೆ ಮಣ್ಣು ಮಾಡಿದರು. ತಿಥಿ ಮಾಡಲು ಚೈತನ್ಯವಿಲ್ಲ ಸ್ವಾಮಿ ಕೆಲಸನಾದ್ರು ಸಿಗುತ್ತೇನೊ ಅಂದುಕೊಂಡು ಬೀದಿ ಬೀದಿ ಅಲೆದೆ ಸಾಮಿ ಯಾರು ಕೆಲಸ ಮಾಡಿಸಿಕೊಳ್ಳಲು ಇಷ್ಟಪಡಲಿಲ್ಲ" ಅಂದಳು ಕಣ್ಣೀರು ಒರೆಸುತ್ತಾ. 'ಯಾವ ಮನೆಯವರು, ಯಾಕೆ ಕೆಲಸಕ್ಕೆ ಸೇರಿಸೊಲ್ಲ' ಅಂದೆ. "ನಾನು ಬಲಗೈನವಳು ಅಂತ ಬುದ್ಧಿ, ಈ ಕೂಸು ಬೇರೆ ಹಾಲಿಲ್ಲದೆ ಹಂಬಲಿಸುತ್ತಿದೆ, ಜರ ಬೇರೆ ಬಾದಿಸುತ್ತಿದೆ' ಹಾಳು ದೇವರು ಇದನ್ನು ಬೇರೆ ಮಡಿಲಿಗಿಟ್ಟು ಕಣ್ಮುಚ್ಚಿ ಕಲ್ಲಾಗಿ ಕುಂತವ್ನೆ' ಅಂದಳು. ಬಲಗೈ ಆದರೇನು ಎಡಗೈ ಆದರೇನು ಕೆಲಸ ಮಾಡೋಕೆ' ಅಂದೆ. ಅವರ ಮನೆ ಪಾತ್ರೆ ಪಗಡೆ ಮುಟ್ಟಿದ್ರೆ ಮೈಲಿಗೆಯಂತೆ ಬುದ್ಧಿಯೋರ' ಅಂ[illegible] ಖಿನ್ನಳಾಗಿ.

ಮನುಷ್ಯ ಮನುಷ್ಯನನ್ನು ತುಚ್ಛವಾಗಿ ಪ್ರಾಣಿಯಂತೆ ನೋಡುವ ಈ [illegible]ಯೊಂದು ಏಕೆ ಸೃಷ್ಟಿಯಾಯಿತೊ? ಎಂದೆನಿಸುತ್ತ[illegible] ಕೈಗಷ್ಟು ಕಾಸಿಟ್ಟು ಭಾರವಾದ ನೋವನ್ನು ತುಂಬಿಕೊಂಡು ಹೊರಟೆ. ರಸ್ತೆಯಲ್ಲಿ ಬರುವ ಲಲನಾಮಣಿಯ[illegible] ಆಕೆಗೆ ಹೋಲಿಸಿದಾಗ ಜೇಸಿಗೆಯಾಯಿತು. ಹಾ[illegible]ಗೆ ಬಂದು ಭಾರವಾದ ನೋವನ್ನು ತಡೆಯಲಾ[illegible] ಕುರ್ಚಿಗೊರಗಿ ಕುಳಿತಾಗ ಯಾವುದೊ ಚಿತ್ರನಟಿ[illegible] ಚಿತ್ರ ಬಿಡಿಸುತ್ತಾ, ಯಾವುದೊ ಸಿನಿಮಾದ ಹಾಡ ಗುನುಗುತ್ತಾ, ಗಳಿಗೆಗೊಮ್ಮೆ ಕನ್ನಡಿ ನೋಡಿ ತಲೆ ತೀಡುತ್ತಾ, ಹಾಸ್ಟೆಲ್ ಪಕ್ಕದ ಸಾಹುಕಾರರ ಮನೆಯ ಚೆಂದ ಬಣ್ಣಿಸುತ್ತಾ, ಮನೆ ಒಳಗಿರುವ ಸಾಹುಕಾರರ ಮಗಳ ಅಂದ ನೋಡಿ ಹಲ್ಲು ಬಿಟ್ಟು ಜೊಲ್ಲು ಸುರಿಸುತ್ತಾ, ಕಾಲಹರಟೆ ಹೊಡೆಯುವ ಈ ನನ್ನ ದಲಿತ ಮಿತ್ರರು! 'ಸಾವಿರ ಸಾವಿರ ನೋವುಗಳಲ್ಲಿ ಬೆಂದು ನೊಂದು ನಶಿಸಿ ಸಾಯುತ್ತಿ[illegible], ತಮ್ಮಂತ ಅಕ್ಕ ತಂಗಿಯರ' ಅಣ್ಣ ತಮ್ಮಂದಿರ ಸಂಕಟದ ಉರಿ ಇವರ ಕಲ್ಲಾದ ಹೃದಯವನ್ನು ಕೊರೆಯಬಾರದೆ?

— ಹಿಟ್ನಳ್ಳಿ ಮಹಾದೇವ

ಲಿಂಗವಂತ ಮಹಿಳೆಯ ಅವಸಾನ

ಮಹಿಳೆ ಪಂಜರದೊಳಗಿನ ಹಕ್ಕಿ ಎನ್ನುವ ಭಾವನೆ ಇಂದಿಗೂ ಹೋಗಿಲ್ಲ. ಮಹಿಳೆಗೂ ಹರಿಜನರ ಹಾಗೆ, ಅನಾಥರ ಹಾಗೆ ಬೇರೊಬ್ಬರ ಅನುಕಂಪೆಗೆ ಪಾತ್ರರಾಗುವ ಸ್ಥಿತಿ ಇದೆ ಅನ್ನುವುದಕ್ಕೆ ಇತ್ತೀಚಿಗೆ ಆಚರಿಸಲ್ಪಟ್ಟ ಮಹಿಳಾ ವರ್ಷವೇ ಸಾಕ್ಷಿ. ಗಂಡಂದಿರ ಲೈಂಗಿಕ ಶೋಷಣೆ ಮಾತ್ರವಲ್ಲದೇ, ಧಾರ್ಮಿಕ-ಆದರ ಮೂಲಕ ದೈವದ ದಬ್ಬಾಳಿಕೆಗೆ ಮಹಿಳೆ ಒಳಗಾಗಿರುವುದು ಅತ್ಯಂತ ದುರದೃಷ್ಟಕರ. ನಮ್ಮ ಭಾರತೀಯ ಮಹಿಳೆಯಂತೂ 'ಭಸ್‌ನಾಲಾ' ಕಾರ್ಮಿಕನಂತೆ ಸದಾ ದುಡಿಯುವ, ಅಪಾಯದ ಅಂಚಿನಲ್ಲಿರುವ ದುರಂತದ ವ್ಯಕ್ತಿ. ಸನಾತನ ಧರ್ಮ ಮಹಿಳೆಯ ಶೋಷಣೆಗೆ ಫಲವತ್ತಾದ ಕ್ಷೇತ್ರವನ್ನು ನಿರ್ಮಿಸಿಕೊಟ್ಟದ್ದು ಐತಿಹಾಸಿಕ ದುರಂತ. ಮಹಿಳೆ ಈಚೆ ಬಂದರೆ ಪುರುಷರ ಪುರುಷತ್ವಕ್ಕೆ ಅವಮಾನ ಅನ್ನುವ ಪ್ರಜ್ಞೆ ರಾಷ್ಟ್ರದ ಅರ್ಧ ಶಕ್ತಿಯನ್ನು ಹುದುಗಿಸಿ ಬಿಟ್ಟಂತಾಯಿತು. ಹನ್ನೆರಡನೇ ಶತಮಾನದ ಇಡೀ ನಮ್ಮ ಭಾರತದಲ್ಲಿ ಒಂದು ಮಹತ್ವದ ಸಮಯ. ಮಹಿಳೆಯ ಸಂಧರ್ಭದಲ್ಲಂತೂ ಈ ಶತಮಾನಕ್ಕೆ ಬಹಳ ಮಹತ್ವವಿದೆ. ನೂರಾರು ವರ್ಷಗಳಿಂದ ಶೋಷಣೆಗೆ ಒಳಗಾದ ಮಹಿಳೆ ಒಮ್ಮಲೇ 'ಬೆತ್ತಲಾಗಿ', ಅಪ್ಪ ಅಮ್ಮಂದಿರು ಕೈ ಹಿಡಿಸಿದ ಗಂಡನನ್ನು ತ್ಯಜಿಸಿ, 'ಜಲದ ಮಂಟಪದ ಮೇಲೆ, ಬೆಂಕಿಯ ಚಪ್ಪರವನ್ನಿಕ್ಕಿ, ಕಾಲಿಲ್ಲದ ಹೆಂಡತಿಯಾಗಿ, ತಲೆಯಿಲ್ಲದ ಗಂಡನನ್ನು 'ಮದುವೆಯಾದ ಪರ್ವಕಾಲ ಇದು. ಅನುಭವ ಮಂಟಪದಂತಹ ವಿಶ್ವವಿದ್ಯಾನಿಲಯದಲ್ಲಿ ಸಮರ್ಪಕವಾದ ರೀತಿಯಲ್ಲಿ ವಾದೋಪವಾದಗಳನ್ನು ಮಂಡಿಸುತ್ತಾ, ಅಲ್ಲಮಪ್ರಭು, ಬಸವಣ್ಣ ಚನ್ನಬಸವಣ್ಣ ಎಲ್ಲರ ನಡುವೆ ಒಂದು ವ್ಯಕ್ತಿತ್ವವಾಗಿ ಮಹಿಳೆ ಅಸ್ತಿತ್ವ ಪಡೆದ ಕಾಲವದು. ಆದರೆ, ಮಿಂಚಿನಂತೆ ಕ್ಷಣಕಾಲ ಬೆಳಗಿ ಮಾಯವಾದ ಕ್ರಾಂತಿಯೊಂದಿಗೆ ಸ್ತ್ರೀತ್ವದ ಸ್ವಾತಂತ್ರ್ಯವೂ ಬತ್ತಿ ಹೋಯಿತು. ಅದು ಕ್ರಾಂತಿಯ ಕೂಸಾದ ಇಂದಿನ ಲಿಂಗವಂತ ಮಹಿಳೆ ಸತ್ಯನಾರಾಯಣ ವ್ರತ, ರಾಘವೇಂದ್ರ ಪೂಜೆ, ಇತ್ಯಾದಿ ದಡ್ಡತನಗಳಿಗೆ ಬಲಿ ಬಿದ್ದಿರುವ ಮಾಮೂಲಿ, ಸನಾತನ ಮಹಿಳೆಯಾಗಿದ್ದಾಳೆ. ಭಾರತದ ಇತಿಹಾಸ ಕಂಡ ಮಹತ್ವದ ದುರಂತಗಳಲ್ಲಿ ಇಂದಿನ ಲಿಂಗವಂತ ಮಹಿಳೆ ಇರುವ ದುರವಸ್ಥೆ ಕೂಡಾ ಒಂದು.

— ಉಷಾ ಭರತಾದ್ರಿ

(ಸೌಜನ್ಯ : ಸಮನ್ವಯ)

ಭೂ ಒಡೆತನಕ್ಕೆ ಗೇಣಿದಾರರು ಕೊಡಬೇಕಾದ ಹಣಕ್ಕೆ ಸರ್ಕಾರದ ನೆರವು

ವಿವರ: ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ವಿಚಾರಿಸಿ

ಭೂ ಸುಧಾರಣಾ ಕಾಯಿದೆಯ ತ್ವರಿತಗತಿಯಲ್ಲಿ ಜಾರಿಗೆ ತಂದಿರುವ ರಾಜ್ಯಗಳಲ್ಲೇ ಮುಂಚೂಣಿಯಲ್ಲಿದೆ ಕರ್ನಾಟಕ. ಭೂ ನ್ಯಾಯಮಂಡಳಿಗಳ ಮೂಲಕ ಫೆಬ್ರುವರಿ, ೧೯೮೨ ರವರೆಗೆ ೮, ೦೯, ೦೭೪ ಅರ್ಜಿಗಳನ್ನು ಇತ್ಯರ್ಥಗೊಳಿಸಲಾಗಿದೆ. ಭೂ ಮಾಲೀಕರಿಂದ ವಶಪಡಿಸಿಕೊಳ್ಳಲಾದ ೨, ೬೯, ೨೩೨ ಎಕರೆ ಜಮೀನಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಭೂ ರಹಿತರಿಗೆ ಹಾಗೂ ೨೬,೦೭೫ ಎಕರೆ ಜಮೀನನ್ನು ಇತರ ಹಿಂದುಳಿದ ವರ್ಗದವರಿಗೆ ಹಂಚಲಾಗಿದೆ.

- ಭೂ ಒಡೆತನದ ಹಕ್ಕು ಪಡೆದ ಗೇಣಿದಾರರು ಭೂಮಿಗಾಗಿ ನೀಡಬೇಕಾದ ಹಣವನ್ನು ಸರ್ಕಾರಕ್ಕೆ ಪಾವತಿ ಮಾಡಬೇಕು.
- ಈ ಹಣವು ಎರಡು ಸಾವಿರ ರೂ. ಗಳಿಗಿಂತ ಹೆಚ್ಚಾಗಿದ್ದರೆ ಮೊದಲ ಕಂತಿನಲ್ಲಿ ಎರಡು ಸಾವಿರ ರೂ. ಗಳನ್ನೂ ಉಳಿದ ಹಣವನ್ನು ೨೦ ವಾರ್ಷಿಕ ಕಂತುಗಳಲ್ಲಿ ಶೇಕಡಾ 5½ ಬಡ್ಡಿಯೊಂದಿಗೆ ಪಾವತಿ ಮಾಡಬೇಕು.
- ರೈತರು ಈ ಹ... ಪಾವತಿ ಮಾಡುವಲ್ಲಿ ನೆರವಾಗಲು ಸರ್ಕಾರ ಯೋಜನೆಯೊಂದನ್ನು ರೂಪಿಸಿದೆ.
- ಈ ಯೋಜನೆಯಂ... ಸಂಬಂಧಿಸಿದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಹಣ ಪಾವತಿಗಾಗಿ ಸಾಲ ನೀಡುತ್ತವೆ.
- ಸಾಲದ ನೆರವು ಪಡೆಯ...ಯಸುವ ರೈತನು ಭೂನ್ಯಾಯ ಮಂಡಳಿಯು ನೀಡಿದ ಜಮೀನು ಮಂಜೂರಾತಿ ಆದೇಶವನ್ನು ಅರ್ಜಿ...ಜೊತೆ ಬ್ಯಾಂಕಿಗೆ ಒದಗಿಸಿ ಕೊಡಬೇಕು.
- ಪಡೆಯುವ ಸಾಲ... ತನ್ನ ...ಜಮೀನನ್ನೇ ...ಆಧಾರ ಮಾಡಿ ಕೊಡಬೇಕು. ಇದೇ ಆಧಾರದ ಮೇಲೆ ರೈತನು ಭೂ ಅಭಿವೃದ್ಧಿಗಾಗಿ ...ಚ್ಚಿನ ಸಾಲವನ್ನು ಅದೇ ಬ್ಯಾಂಕಿನಿಂದಲೇ ಪಡೆಯಬಹುದು.
- ಈ ಸಂ...ದಲ್ಲಿ ಹೆಚ್ಚಿನ ವಿವರಗಳಿಗೆ ಆಯಾ ತಾಲ್ಲೂಕಿನ ಭೂ ಅ... ...ಬ್ಯಾಂಕುಗಳಲ್ಲಿ ವಿಚಾರಿಸಬೇಕ...

ಪ್ರಕಟಣೆ: ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ

ಮೊದಲ ಪುಟದಿಂದ

"ಸಾಮಾಜಿಕ ಬಹಿಷ್ಕಾರ" ಹಾಕಿದ್ದಾರೆ. ಭೀರ್ಮೈನ್ನರ ಮೇಲೆ ಹಲ್ಲೆ ನಡೆದ ನಂತರ ದಲಿತ ಸಂಘರ್ಷ ಸಮಿತಿ ಜಿಲ್ಲಾ ಪೋಲೀಸ್ ಅಧಿಕಾರಿಗೆ ತಂತಿ ಸಂದೇಶ ಕಳಿಸಿ ರಕ್ಷಣೆಕೋರಿತು. ಆದರೆ ಅದು ಫಲಕಾರಿಯಾಗಲಿಲ್ಲ. ಭೀರ್ಮೈನ್ನರು ದೂರಿತ್ತರೂ ಪ್ರಯೋಜನವಾಗಲಿಲ್ಲ. ಸರ್ಕಲ್ ಇನ್ಸ್‌ಪೆಕ್ಟರ್ ಅನುಸಾಯಿ ಚಿನ್ನಸ್ವಾಮಿ ಕೂಡ ಇಲ್ಲಿನ ದಲಿತರಿಗೆ ಕಿರುಕುಳ ನೀಡಿದ.

ಸ॥ ಇ॥ ಸೋಮಶೇಖರ್ ಹರಿಜನರ ಪೈಕಿ ಯಾರನ್ನಾದರೂ ಕೊಲೆ ಮಾಡಿ ಬರುವಂತೆ ವಕ್ಕಲಿಗರಿಗೆ ಪುಸಲಾಯಿಸಿದ. ಈ ನಡುವೆ ದೇವರಸನ ಹಳ್ಳಿಯ ಕೆಲವು ದಲಿತ ವಿದ್ಯಾರ್ಥಿಗಳು ಸರ್ಕಲ್ಲರ ಹತ್ತಿರ ನ್ಯಾಯ ಕೇಳಲು ಹೋದಾಗ ತನ್ನ ಮೇಲಧಿಕಾರಿ ಎದುರು ಹುಡುಗರ ವಿರುದ್ಧ "ಹುಚ್ಚು ನಾಯಿ" ಯಂತೆ ರೇಗಾಡಿದ: "ಹೊಲೆಯರಿಗೇನು ಕೊಂಬಿದೆಯಾ ನಾನಾಗಿದ್ರೆ ಜೀವಂತ ಸುಡಿಸುತ್ತಿದ್ದೆ" ಎಂದು ತನ್ನ ಹಲ್ಕಾತನವನ್ನು ತೋರಿದ.

ಹಣಕ್ಕಾಗಿ ಹೇಲು ತಿನ್ನಲು ರೆಡಿಯಾಗಿರುವ ಸರ್ಕಲ್ ಇನ್ಸ್‌ಪೆಕ್ಟರ್ ಸೋಮಶೇಖರ್ ನೀಡಿದ ಪ್ರಚೋದನೆಯಿಂದಾಗಿ ಹರಿಜನ ಕೆಂಚಯ್ಯನಮೇಲೆ ವಕ್ಕಲಿಗರ ಒಂದುಗುಂಪು ಉಗ್ರವಾದ ಹಲ್ಲೆನಡೆಸಿತು. ಕೊನೆ ಗಳಿಗೆಯಲ್ಲಿ ಕೆಂಚಯ್ಯ ನಂಜನಗೂಡು ಸರ್ಕಾರಿ ಆಸ್ಪತ್ರೆ ಸೇರಿದ. ನಂಜನಗೂಡು ಸರ್ಕಾರಿ ಡಾಕ್ಟರು ಚಿನ್ನಯ್ಯ 3000ರೂಗಳ ಲಂಚ ಪಡೆದು ಆಸಾಮಿ ಕುಡಿದು, ಆಯತಪ್ಪಿಬಿದ್ದು ತಲೆಯೊಡೆದು ಸತ್ತನೆಂದು ಸುಳ್ಳು ಸರ್ಟಿಫಿಕೇಟ್ ನೀಡಿದನೆಂದು ಇಲ್ಲೆಲ್ಲ ವದಂತಿಯಿದೆ. ಕೊನೆಗೆ ಕೆಂಚಯ್ಯನ ಹೆಣ ಕೆ. ಆರ್ ಆಸ್ಪತ್ರೆ ತಲುಪಿತು. ಈ ವೇಳೆಗೆ ವಿಚಾರ ಗೊತ್ತಾಗಿ ಆತನ ಬಂಧುಗಳು ಹೆಣ ತಮಗೆ ಬೇಕೆಂದರು. ಪೋಲಿಸರಿಗೆ ಹೆಣದ ಕುಲ ಗೋತ್ರಗಳು ಊರುಕೇರಿಗಳು ಖಚಿತವಾಗಿ ಗೊತ್ತಿದ್ದೊ ಅವರೂ ಗುಟ್ಟಾಗಿ ದಫನ್ ಮಾಡುವ ಪ್ರಯತ್ನಗಳು ನಡೆದರೂ ಅದು ಸಫಲವಾಗಲಿಲ್ಲ.

ಈ ಕೊಲೆ ಮುಂದಿನ ಎಲ್ಲ ಕೊಲೆಗಳಿಗೆ ಕಾರಣವಾಯಿತು. ಹನ್ನೊಂದರಂದು ಬೆಳಗಿನ ಜಾವ ವಕ್ಕಲಿಗರ ಪ್ರಭಾಕರ ಕೊಲೆಯಾದ. ಸಂಜೆಹೊತ್ತಿಗೆ ಕೆಂಚೆಗೌಡ ಕೊಲೆಯಾದರು. ಅದೇ ದಿನ [illegible] ಜನ ಮುದುಕ ಬಸವಯ್ಯ, [illegible] ಇಲ್ಲಿ ಜೀವದ ಪೋಲೀಸ್ ಕುತ್ತ[illegible] ಇಂದು ಇದ್ದವರು ನಾಳೆ [illegible]ತ್ತಾರೆಂಬ ಗ್ಯಾರಂಟಿಯಿಲ್ಲ.

ಈ ಎಲ್ಲ ದುಸ್ಥಿತಿಗೂ ಸರ್ಕಲ್ ಇನ್ಸ್‌ಪೆಕ್ಟರ್ ಸೋಮಶೇಖರ್ ಕಾರಣವಾಗಿದ್ದಾನೆ. ಈ ಕೂಡಲೇ ಆತನ ಮೇಲೆ ಉಗ್ರ ಕ್ರಮ ಕೈಗೊಳ್ಳದಿದ್ದರೆ ಇನ್ನೂ ಹತ್ತಾರು ಕೊಲೆಗಳಾಗುವುದಂತೂ ಖಂಡಿತ.

—ಮುಳ್ಳೂರು ನಾಗರಾಜ್

ರಾಜಕೀಯಾತೀತ ಬುದ್ಧಿಜೀವಿಗಳ

ರಾಜಕೀಯಾತೀತರಾಗಿ ಮಡಿಯುಟ್ಟು ಕೂತಿರುವ
ನನ್ನ ದೇಶದ ಬುದ್ಧಿ ಜೀವಿಗಳನ್ನು
ನನ್ನ ಜನಗಳು—ಅತಿ ಸಾಮಾನ್ಯ ಜನಗಳು
ತಡೆದು ನಿಲ್ಲಿಸಿ ಕೇಳುವ ದಿನವೊಂದು ಬರುತಿದೆ.
ದೇಶದ ಪ್ರತಿ ಅಣು ಅಣುವು
ಒಡೆದು ಹೋಳಾಗಿ ಕ್ಷೀಣಿಸುತ್ತಾ ಇದ್ದರೆ
ನೀವೇನು ಮಾಡುತ್ತಿರೆಂದು
ಸಂಚಾಯಿಷಿ ಕೇಳುವ ದಿನವೊಂದು ಬರುತಿದೆ.
ಅವರ ಅಂದವಾದ ಉಡಿಗೆ ತೊಡಿಗೆಗಳನ್ನು ಕುರಿತು
ಮದ್ಯಾಹ್ನ ಗಡದ್ದಾಗಿ ಮಾಡುವ ಮೃಷ್ಟಾನ್ನ ಊಟದ
ತರುವಾಯ ಮಲಗುವ ನಿದ್ರೆಯನ್ನು ಕುರಿತು
ಬ್ರಹ್ಮ ಪದಾರ್ಥವನ್ನು ಕುರಿತು, ಅವರು ಮಾಡುವ ಅರ್ಥವಿಲ್ಲದ
ವ್ಯರ್ಥ ಚರ್ಚೆಯನ್ನು ಕುರಿತು ಯಾರೂ ಯೋಚಿಸುವುದಿಲ್ಲ
ಅವರ ಅರ್ಥಶಾಸ್ತ್ರ ವಿಜ್ಞಾನವನ್ನು ಕುರಿತು
ರಾಜ್ಯಾಂಗ ವಿವಾದಗಳನ್ನು ಕುರಿತು
ವ್ಯಾಕರಣ ಪಾಂಡಿತ್ಯ ಕುರಿತು
ಸಾಹಿತ್ಯ ಮೀಮಾಂಸೆಯ ಕುರಿತು ಯಾರೂ ಯೋಚಿಸುವುದಿಲ್ಲ
ತಮ್ಮೊಳಗಿನ ಹೇಡಿತನವನ್ನು ನೋಡಿಕೊಂಡು
ತಮ್ಮನ್ನು ತಾವೇ ಅಸಹ್ಯಿಸಿ ಕೊಳ್ಳುವ
ಮೂರ್ಖ ಮಾತುಗಳನ್ನು ಯಾರೂ ಕೇಳುವುದಿಲ್ಲ
ಸುಳ್ಳಿನ ನೆರಳುಗಳು ವಿಹಾರಿಸುವ ನಿಮ್ಮ ಆತ್ಮ ಸಮರ್ಥ[illegible]ಳಾಗಿ.
[illegible]ನ[illegible]ಗಳನ್ನು
ಯಾರೂ ಕೇಳುವುದಿಲ್ಲ.
ಈ ದಿನ ನನ್ನ ದೇಶದ ಅತಿ ಸಾಮಾನ್ಯ ಜನಗಳು
ರಾಜಕೀಯಾತೀತರಾದ ಬುದ್ಧಿಜೀವಿಗಳ ಪುಸ್ತಕಗಳ[illegible]ಲ್ಲಿ ಸ್ಥಾನವಿಲ್ಲದವರು
ಆ ಬುದ್ಧಿ ಜೀವಿಗಳಿಗೆ ದಿನಾಲು ಬಿಟ್ಟಿ ಸೇವೆ ಮಾ[illegible]ಡಿದವರು
ಹಾಲು ಹಾಕಿದವರು ಕಾಯಿಪಲ್ಲೆ ತಂದವರು
ಮನೆಗಳನ್ನು ಗುಡಿಸಿದರು ರಿಕ್ಷಾಗಳನ್ನು ತುಳಿದವರು
ಬಂಡೆಗಲ್ಲುಗಳನ್ನು ಹೊತ್ತ[illegible] ಬಟ್ಟೆಗಳನ್ನು ಹೊಲಿದವರು
ನಾಯಿಗಳನ್ನು [illegible]ದವರು ಸಸ್ಯಗಳನ್ನು ನೆಟ್ಟವರು
[illegible]ನ್ನವರು ಕೇಳುತ್ತಾರೆ
ತುತ್ತು ಕೂಳಿಲ್ಲದೆ ಬಡವರು ಸಾಯುತ್ತಾ ಇದ್ದಾಗ
ನೀವೇನು ಮಾಡುತ್ತೀರೆಂದು
ರಾಜಕೀಯ ನಮಗೇಕೆಂದು, ಮೇದಸ್ಸನ್ನು ಅವಿಯಾಗಿ ಬಿಟ್ಟ
ನನ್ನ ದೇಶದ ಮೇದಾವಿಗಳಿರ
ಹಾಗಂತ ತಿಳಿದುಕೊಂಡ ಮೆದುಳಿಲ್ಲದ ತಲೆ.ಬುರುಡೆಗಳಿರಾ
ನಿಮಗೆ ಆಗ, ಆವಾಗ ಹೇಳಲು ಸಮಾಧಾನವಾದರೂ ಎಲ್ಲಿರುತ್ತೆ
ನಿಮ್ಮ ಗುಂಡಿಗೆಗಳನ್ನು ಉಕ್ಕು ಕೊಕ್ಕಿನ ನಗ್ನ ಸತ್ಯವು ಕುಕ್ಕುತ್ತಿದ್ದರೆ
ನಾಚಿಕೆಯಿಂದ ನೀವು ನೀರಾಗಿ ತಲೆ ತಗ್ಗಿಸುತ್ತೀರಿ.

ಮೂಲ : ಬತೊ-ರೆನಿ-ಕಸ್ತಿಯೋ
ಅನುವಾದ : ಬೋಳ ಬಂಡೆಪ್ಪ

ಸಂಪಾದಕ,ಪ್ರಕಾಶಕ, : ಗೋವಿಂದಯ್ಯ, ವಿನಯ ಪ್ರಿಂಟರಿ 2514, ಕೆ. ಜಿ. ಕೊಪ್ಪಲು, ಮೈಸೂರು-14.